ಜೂನ್ 2023 : ಬೆಲೆ ರೂ.1

## ದೆಹಲಿ ಕರ್ನಾಟಕ ಸಂಘದ

# ಅಭಿಮತ



## ಪ್ರಜಾಪ್ರಭುತ್ವದ ದೇಗುಲ ಭಾರತದ ಸಂಸತ್ತಿನ ನೂತನ ಭವನ




**ಬಿಡುಗಡೆಗೆ ಸಿದ್ಧಗೊಂಡಿರುವ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಸ್ಮರಣ ಸಂಚಿಕೆ**

**“ಬಾರಿಸು ಕನ್ನಡ ಡಿಂಡಿಮವ”**

ಅಭಿಮತ
ದೆಹಲಿ ಕರ್ನಾಟಕ ಸಂಘದ
ಸಂಪುಟ 33 । ಸಂಚಿಕೆ 9
ಜೂನ್ 2023

**ಅಭಿಮತ ಸಂಪಾದಕ ಮಂಡಳಿ**

ಪ್ರಧಾನ ಸಂಪಾದಕ
ಚಂದ್ರಶೇಖರ ಎನ್.ಪಿ.

ಸಂಪಾದಕ ಮಂಡಳಿ ಸದಸ್ಯರು
ಕೆ.ಎಸ್. ಮೂರ್ತಿ
ಯಲ್ಲಾಲಿಂಗ ಕೊಪ್ಪದ
ತಿಮ್ಮಪ್ಪ ಜಿ.ಆರ್.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷರು
ಸಿ.ಎಂ. ನಾಗರಾಜ

ಉಪಾಧ್ಯಕ್ಷರು
ಡಾ. ಎಂ.ಎಸ್. ಶಶಿ ಕುಮಾರ್
ಪೂಜಾ ಪಿ. ರಾವ್

ಪ್ರಧಾನ ಕಾರ್ಯದರ್ಶಿ
ಆರ್. ರೇಣುಕುಮಾರ್

ಕೋಶಾಧಿಕಾರಿ
ರಾಧಾಕೃಷ್ಣ

ಜಂಟಿ ಕಾರ್ಯದರ್ಶಿಗಳು
ಜಿ. ನಾರಾಯಣ
ಸುಮಿತಾ ಮುರಗೋಡ

ಸಮಿತಿ ಸದಸ್ಯರು
ಪ್ರಭಾಕರ ಮಡ್ಡಿತೋಟ್
ಶಿವಪ್ಪ ಎಂ
ಎ.ಟಿ. ಶ್ರೀನಿವಾಸ
ಮಾಲಿನಿ ಪ್ರಹ್ಲಾದ್
ಕೆ.ಎಸ್. ಮೂರ್ತಿ
ನವೀನ್ ಕುಮಾರ್ ವಿ.
ಸವಿತಾ ನೆಲ್ಲಿ
ಅಶ್ವಿನಿ ಬಿ.ಎಸ್.
ಸಂತೋಷ ಜೆ
ಚಂದ್ರಶೇಖರ ಎನ್.ಪಿ.

**ಕಾವಲು ಸಮಿತಿ**

ಅನಂತರಾಮ ಅರಳಿ
ಸಂಜೀವ ದೇಶಪಾಂಡೆ
ಐ. ಶಂಭುಲಿಂಗಪ್ಪ

## ಸಂಪಾದಕೀಯ

# ಹೊಸ ಸಂಸತ್ ಭವನ ದೇಶದ ಪ್ರಗತಿಗೆ ಹೊಸ ಮಾರ್ಗಗಳನ್ನು ಶೋಧಿಸುವ ದಿಗ್ದರ್ಶಕವಾಗಲಿ

ಬಂಧುಗಳೇ, 2023 ರ ಮೇ 28 ರಂದು ಭಾರತದ ಸನ್ಮಾನ್ಯ ಪ್ರಧಾನ ಮಂತ್ರಿಗಳು ಹೊಸದಾಗಿ ನಿರ್ಮಾಣಗೊಂಡ ಸಂಸತ್ ಭವನದ ಲೋಕಾರ್ಪಣೆಯನ್ನು ಮಾಡುವ ಮೂಲಕ ದೇಶದ ಪ್ರಜಾಪ್ರಭುತ್ವದ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ತೆರೆದಂತಾಗಿದೆ. ಇಪ್ಪತ್ತೊಂದನೆ ಶತಮಾನದಲ್ಲಿ ಬದಲಾಗುತ್ತಿರುವ ಜಗತ್ತಿಗೆ ಅನುಗುಣವಾಗಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಸಂಸತ್ತಿನ ಕಾರ್ಯಕಲಾಪಗಳು ಸುಗಮವಾಗಿ ಮತ್ತು ಸುಸೂತ್ರವಾಗಿ ನಡೆಯುವಂತೆ ಮತ್ತು 2026ರಲ್ಲಿ ನಡೆಯಬೇಕಿರುವ ಕ್ಷೇತ್ರ ಮರು ವಿಂಗಡಣೆಯನ್ನು ಗಮನದಲ್ಲಿಟ್ಟುಕೊಂಡು ಹೆಚ್ಚಾಗಲಿರುವ ಸಂಸತ್ ಸದಸ್ಯರುಗಳಿಗೆ ಸಂಸತ್ತಿನಲ್ಲಿ ಕಲ್ಪಿಸಬೇಕಾದ ಆಸನಗಳ ಸಂಖ್ಯೆ, ಕಲಾಪಗಳ ಗುಣಮಟ್ಟ ಹೆಚ್ಚಳಕ್ಕೆ ಬೇಕಾದ ಎಲ್ಲ ಸವಲತ್ತುಗಳನ್ನು ವಿಶೇಷವಾಗಿ ಸುರಕ್ಷಾ ವ್ಯವಸ್ಥೆ, ಧ್ವನಿ ವ್ಯವಸ್ಥೆ, ಡಿಜಿಟಲ್ ಗ್ರಂಥಾಲಯ ವ್ಯವಸ್ಥೆ, ಭಾಷಾಂತರಣ ವ್ಯವಸ್ಥೆ ಮೊದಲಾದವುಗಳನ್ನು ಹೊಸ ಸಂಸತ್ ಭವನದಲ್ಲಿ ಕಲ್ಪಿಸಲಾಗಿದೆ. ಮತ್ತೊಂದು ವಿಶೇಷವೆಂದರೆ ಭಾರತದ ಸಂವಿಧಾನದ ಎಂಟನೆ ಪರಿಚ್ಛೇದ ದಲ್ಲಿರುವ ಕನ್ನಡ ಭಾಷೆಯೂ ಸೇರಿದಂತೆ ಎಲ್ಲ 22 ಭಾಷೆಗಳಲ್ಲೂ ಕೂಡ ನಿರಂತರ ಭಾಷಾಂತರಣಕ್ಕೆ ಅವಕಾಶ ಕಲ್ಪಿಸಲಾಗಿದ್ದು ಸಂವಿಧಾನದ ಮಾನ್ಯತೆ ಪಡೆದ ಎಲ್ಲ ಭಾಷೆಗಳಲ್ಲೂ ಹೊಸದಾಗಿ ಐದು ಜನ ಭಾಷಾಂತರಕಾರರನ್ನು ನೇಮಕ ಮಾಡಿಕೊಳ್ಳುತ್ತಿರುವುದು ಕನ್ನಡವೂ ಸೇರಿದಂತೆ ಎಲ್ಲ ಭಾರತೀಯ ಭಾಷೆಗಳ ದೃಷ್ಟಿಯಿಂದ ಮಹತ್ವದ ಬೆಳವಣಿಗೆ. ಒಟ್ಟಾರೆ ಸಂಸತ್ತಿನ ಹೊಸ ಕಟ್ಟಡ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವದ ದೇಗುಲವಾಗಿರುವ 'ಭಾರತದ ಸಂಸತ್'ಗೆ ಹೊಸ ಶಕ್ತಿ ಮತ್ತು ಸಾಮರ್ಥ್ಯವನ್ನು ತಂದುಕೊಡುತ್ತದೆಂಬುದರಲ್ಲಿ ಅನುಮಾನವಿಲ್ಲ.

ಇನ್ನು ಕರ್ನಾಟಕದ ಮಟ್ಟಿಗೂ ಕೂಡ ಮೇ ತಿಂಗಳು ವಿಶಿಷ್ಟವಾದುದಾಗಿದೆ. ರಾಜ್ಯ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಹೊಸದಾಗಿ ಸರ್ಕಾರ ರಚಿಸಿದೆ. ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಮುಖ್ಯಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್ ಅವರೂ ಸೇರಿದಂತೆ ಹೊಸ ಸಂಪುಟ ರಚನೆ ಮಾಡಿದ್ದಾರೆ. ಹೊಸ ಸಂಪುಟದಲ್ಲಿ ಸೇರ್ಪಡೆಯಾಗಿರುವ ಎಲ್ಲ ಗಣ್ಯರಿಗೂ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತೇವೆ.ರಾಜ್ಯದ ಜನರು ಇಟ್ಟುಕೊಂಡಿರುವ ಅಪಾರ ನಿರೀಕ್ಷೆಗಳು ಈಡೇರಿ, ರಾಜ್ಯದ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಸರ್ಕಾರ ಒಳ್ಳೆಯ ನೀತಿಗಳನ್ನು ರೂಪಿಸಿ ಜಾರಿಗೊಳಿಸಲಿ ಎಂದು ಆಶಿಸುತ್ತೇವೆ. ಮುಖ್ಯವಾಗಿ ಹೊರನಾಡಿನಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಗಾಗಿ ಶ್ರಮಿಸುತ್ತಿರುವ ಸಂಘ ಸಂಸ್ಥೆಗಳಿಗೆ ಎಲ್ಲ ಬಗೆಯ ನೆರವು ನೀಡುವ ಮೂಲಕ ಕರ್ನಾಟಕದ ಭಾಷೆ ಮತ್ತು ಸಂಸ್ಕೃತಿ ರಾಷ್ಟ್ರ ರಾಜಧಾನಿ ಮತ್ತು ದೇಶದ ಇತರೆಡೆಗಳಲ್ಲೂ ಪ್ರತಿಧ್ವನಿಸುವಂತಾಗಲಿ ಎಂದು ಆಶಿಸೋಣ.

ಈಗಾಗಲೇ ಬೇಸಿಗೆ ರಜೆ ಪ್ರಾರಂಭವಾಗಿದ್ದು ಶಾಲೆ ಕಾಲೇಜುಗಳಿಗೆ ಬಹುತೇಕ ರಜೆ ಇರುವುದರಿಂದ ನಮ್ಮ ದೆಹಲಿ ಎನ್‌ಸಿಆರ್ ನಲ್ಲಿರುವ ಹೊರನಾಡ ಕನ್ನಡಿಗರು ತಮ್ಮ ತವರಿಗೆ ಹೋಗಿರುವುದರಿಂದ ನಮ್ಮ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಿಗೆ ಸ್ವಲ್ಪ ವಿರಾಮ ಸಿಕ್ಕಂತಾಗಿದ್ದರೂ ಕೂಡ ಡಾ. ಪುರುಷೋತ್ತಮ ಬಿಳಿಮಲೆ ಅವರ ಆತ್ಮಕತೆ 'ಕಾಗೆ ಮುಟ್ಟಿದ ನೀರು' ಕೃತಿಯ ಕುರಿತು ಒಂದು ಸಾಹಿತ್ಯಿಕ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುವ ಡಾ. ಬಿಳಿಮಲೆ ಅವರು ತಮ್ಮ ಆತ್ಮ ಕತೆಯಲ್ಲಿ ತಮ್ಮ ಬದುಕಿನ ಅತ್ಯಂತ ಸಂಕೀರ್ಣವಾದ ಸಂಗತಿಗಳನ್ನೂ ಕೂಡ ನಿರ್ಲಿಪ್ತವಾಗಿ ನಿರೂಪಿಸಿರುವ ಶೈಲಿಯೇ ಅವರ ಆತ್ಮಕತೆಯ ಆಕರ್ಷಣೆ ಎಂದರೆ ಅತಿಶಯೋಕ್ತಿಯೇನಲ್ಲ ಎಂದು ನನ್ನ ಅನಿಸಿಕೆ.

ಇನ್ನು ನಮ್ಮ ಹೊರನಾಡ ಕನ್ನಡಿಗರೂ, ದೆಹಲಿ ಕರ್ನಾಟಕ ಸಂಘದ ನೂತನ ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಆರ್ಥಿಕವಾಗಿ ನೆರವು ನೀಡಿದ್ದ 'ವಿಶಿಷ್ಟ ಕನ್ನಡಿಗ' ಗೌರವ ಪುರಸ್ಕೃತರಾಗಿದ್ದ ಹಿರಿಯ ಕನ್ನಡತಿ ಶ್ರೀಮತಿ ನೇತ್ರಾವತಿ ಮಯ್ಯ ಅವರು, ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಸೇವೆ ಸಲ್ಲಿಸಿದ್ದ ಶ್ರೀ ಹರಿಶ್ಚಂದ್ರ ಬಂಟ್ವಾಳ ಅವರು, ಹಾಗೂ ಸಂಘದ ಆಜೀವ ಸದಸ್ಯರಾಗಿದ್ದ ಶ್ರೀ ಟಿ.ಪಿ. ಭಟ್ ಅವರುಗಳು ನಿಧನರಾಗಿರುವುದಕ್ಕೆ ವಿಷಾಧಿಸುತ್ತೇವೆ. ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರುಗಳ ಕುಟುಂಬದಲ್ಲಿನ ಹತ್ತು ಮತ್ತು ಹನ್ನೆರಡನೆ ತರಗತಿಯಲ್ಲಿ ಶೇಕಡ 95%ಕ್ಕಿಂತ ಹೆಚ್ಚು ಅಂಕ ಗಳಿಸಿದ ಮಕ್ಕಳ ವಿವರಗಳನ್ನು ಸಂಘದ ಕಚೇರಿಗೆ ತಲುಪಿಸಿ, ಮುಂದಿನ ತಿಂಗಳಲ್ಲಿ ಅಂತಹ ಪ್ರತಿಭಾನ್ವಿತ ವಿದ್ಯಾರ್ಥಿ/ನಿಯರುಗಳ ಭಾವಚಿತ್ರ, ಸಂದರ್ಶನ ವರದಿಗಳು ಅಭಿಮತದಲ್ಲಿ ಪ್ರಕಟಗೊಳ್ಳಲು ನೆರವಾಗಬೇಕೆಂದು ತಮ್ಮಲ್ಲಿ ಸವಿನಯ ಪ್ರಾರ್ಥನೆ ಮಾಡುತ್ತೇವೆ. ಪ್ರತಿ ತಿಂಗಳಿನಂತೆ ಈ ಸಂಚಿಕೆಯಲ್ಲೂ ಸಹ ದೆಹಲಿ ಕರ್ನಾಟಕ ಸಂಘದ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ಕಾರ್ಯ ಚಟುವಟಿಕೆಗಳ ವರದಿಯನ್ನು ಹೊತ್ತ ಈ ಸಂಚಿಕೆಯನ್ನು ತಮ್ಮ ಕೈಗಿಡುತ್ತಿದ್ದೇವೆ.

ಧನ್ಯವಾದಗಳು.

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 33 ಸಂಚಿಕೆ 9
ಜೂನ್ 2023, ಬೆಲೆ ರೂ. 1

## ಅಧ್ಯಕ್ಷರ ನುಡಿ



ಕನ್ನಡ ಬಂಧುಗಳೇ, ದೆಹಲಿ ಕರ್ನಾಟಕ ಸಂಘದ ಸದಸ್ಯರೇ, ಮಾನ್ಯ ಪ್ರಧಾನ ಮಂತ್ರಿಗಳು ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವವನ್ನು ಉದ್ಘಾಟನೆ ಮಾಡಿದ ನಂತರ ದೆಹಲಿ ಕರ್ನಾಟಕ ಸಂಘದ ಪ್ರತಿಷ್ಠೆ ಆಕಾಶದ ಎತ್ತರಕ್ಕೆ ಏರಿದೆ. ಮಾನ್ಯ ಪ್ರಧಾನ ಮಂತ್ರಿಗಳು ಹೇಳಿದಂತೆ ದೆಹಲಿ ಕರ್ನಾಟಕ ಸಂಘಕ್ಕೆ 75 ವರ್ಷ ತುಂಬಿವೆ. ಬರುವ 25 ವರ್ಷಗಳು ದೆಹಲಿ ಕರ್ನಾಟಕ ಸಂಘದ ಕಾರ್ಯಚಟುವಟಿಕೆಗಳು ವಿಶ್ವಕ್ಕೆ ಮಾದರಿಯಾಗುವಂತೆ ನಡೆಯಬೇಕು, ಐತಿಹಾಸಿಕ ಕಾರ್ಯಕ್ರಮಗಳು ಅಗಬೇಕೆಂದು ಕಿವಿ ಮಾತನ್ನ ನಮಗೆ ಹೇಳಿದ್ದಾರೆ.

ಹಾಗೆಯೇ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ವರ್ಷದಲ್ಲಿ ಎಷ್ಟೋ ಸದಸ್ಯರು ದೆಹಲಿಯಿಂದ ತಾಯ್ನಾಡಿಗೆ ಹೊರಟಿದ್ದಾರೆ. ದೆಹಲಿ ಕರ್ನಾಟಕ ಸಂಘದ ಅಮೃತವರ್ಷದ ಸಂದರ್ಭದಲ್ಲಿ ನಮ್ಮ ಸದಸ್ಯರಿಗೆ ಮತ್ತು ಕನ್ನಡಿಗರಿಗಾಗಿ ಒಂದು ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು. ಅದರಂತೆ ಬೆಂಗಳೂರಿನಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ಕಾರ್ಯಕ್ರಮವನ್ನು ಅಮೃತ ಮಹೋತ್ಸವ ಸಂಭ್ರಮ ಮತ್ತು ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ಕೃಷಿ ಮಂತ್ರಿಗಳಾದ ಶ್ರೀ ಚೆಲುವರಾಯಸ್ವಾಮಿ, ಕಂದಾಯ ಸಚಿವರಾದ ಶ್ರೀ ಕೃಷ್ಣ ಭೈರೇಗೌಡ, ಮಾಲೂರು ಶಾಸಕರಾದ ಶ್ರೀ ಕೆ ವೈ ನಂಜೇಗೌಡ, ಪರಮಪೂಜ್ಯ ಜಗದ್ಗುರು ಶ್ರೀ ನಂಜಾವದೂತ ಸ್ವಾಮೀಜಿಗಳು ಸಾಹಿತಿಗಳಾದ ಶ್ರೀ ದೊಡ್ಡರಂಗೇಗೌಡರು, ಕರ್ನಾಟಕ ಸರ್ಕಾರದ ಬಿಬಿಎಂಪಿಯ ವಿಶೇಷ ಆಯುಕ್ತರಾದ ಶ್ರೀ ಜಯರಾಮರಾಯಪುರೆ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಆ ದೇವೇಗೌಡರು ಇನ್ನು ಅನೇಕ ಗಣ್ಯಾತಿ ಗಣ್ಯರ ಸಮ್ಮುಖದಲ್ಲಿ ಕಾರ್ಯಕ್ರಮವನ್ನು ಆಚರಣೆ ಮಾಡಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕಲಾವಿದರು ನೃತ್ಯಪಟುಗಳು ಸೇರಿದಂತೆ ಸುಮಾರು 175 ಕಲಾವಿದರು ಬಗೆ ಬಗೆಯ ನೃತ್ಯರೂಪಕ ಪ್ರಕಾರಗಳಲ್ಲಿ ಭಾಗಿಯಾಗಿದ್ದರು. ಜೊತೆಗೆ ಪ್ರೇಕ್ಷಕರ ದಂಡು ರವೀಂದ್ರ ಕಲಾಕ್ಷೇತ್ರದಲ್ಲಿ ಒಟ್ಟು 830 ಆಸನಗಳು ಇದ್ದರೂ ಸಹ ಸುಮಾರು 300 ಪ್ರೇಕ್ಷಕರು ನಿಂತು ನೋಡಬೇಕಾಗಿತ್ತು. ಸಭಾಂಗಣ ತುಂಬಾ ಚಿಕ್ಕದಾಯಿತು. ಇಂತಹ ಕಾರ್ಯಕ್ರಮವನ್ನು ನಾವು ಹಮ್ಮಿಕೊಳ್ಳಲೇ ಬೇಕಾಗಿತ್ತು. ಸ್ಮರಣ ಸಂಚಿಕೆಗೆ ಬೆಂಗಳೂರಿನ ಸ್ನೇಹಿತರು ಬಂಧು ಬಳಗದವರು ಸರಿಸುಮಾರು ರೂ.80 ಲಕ್ಷ ನೀಡಿ ಕಾರ್ಯಕ್ರಮಕ್ಕೆ ಸಹಕಾರವಾಗಿ ನಿಂತಿದ್ದರು. ಇಂತಹ ಮಹಾನುಭಾವರುಗಳನ್ನು ಗೌರವಿಸಿ ಅವರಿಗೆ ಅಭಿನಂದಿಸುವ ಕಾರ್ಯ ಜರುಗಿತು. ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 9:00 ಗಂಟೆಯವರೆಗೆ ಕಾರ್ಯಕ್ರಮ ಜರುಗಿ ಅತ್ಯಂತ ಸುಂದರವಾಗಿ ಮುಕ್ತಾಯವಾಯಿತು. ಈ ಕಾರ್ಯಕ್ರಮಕ್ಕೆ ಬರಬೇಕಾಗಿದ್ದ ಪರಮಪೂಜ್ಯ ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು, ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರು ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ ಶಿವಕುಮಾರ್‌ರವರು ಕಾರಣಾಂತರಗಳಿಂದ ಮತ್ತು ಸಮಯದ ಅಭಾವದಿಂದ ಬರಲು ಸಾಧ್ಯವಾಗಲಿಲ್ಲ. ಆದರೆ ಕಾರ್ಯಕ್ರಮಕ್ಕೆ ಸಂದೇಶವನ್ನು ಕಳಿಸಿಕೊಟ್ಟು ಕಾರ್ಯಕ್ರಮ ಯಶಸ್ವಿಗೆ ಮುನ್ನಡೆಯಾದರು. ಬರುವ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮದ ಮತ್ತು ದೆಹಲಿ ಕರ್ನಾಟಕ ಸಂಘದ ಎಲ್ಲಾ ಕೆಲಸಕಾರ್ಯಗಳ ಜೊತೆಗೆ ಸರ್ಕಾರ ನಿಲ್ಲುತ್ತೆ ಎಂದು ಮಾನ್ಯ ಕೃಷ್ಣ ಭೈರೇಗೌಡರು ಭರವಸೆಯನ್ನು ನೀಡಿದರು. ಜೊತೆಗೆ ಈ ಐತಿಹಾಸಿಕ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ದುಡಿದಂತಹ ಕಾರ್ಯಕಾರಿ ಸಮಿತಿಯ ಎಲ್ಲಾ ಮಾಜೀ ಸದಸ್ಯರುಗಳಿಗೆ, ಪದಾಧಿಕಾರಿಗಳಿಗೆ ಅಭಿನಂದನೆಯನ್ನು ಸಂಘದ ಪರವಾಗಿ ಹಮ್ಮಿಕೊಳ್ಳಲಾಗಿತ್ತು. ಪ್ರೀತಿಯಿಂದ ಬಂದು ಈ ಅಭಿನಂದನೆಯನ್ನು ಸ್ವೀಕರಿಸಿದ ಎಲ್ಲಾ ಪದಾಧಿಕಾರಿಗಳಿಗೆ ಅನಂತ ಅನಂತ ಧನ್ಯವಾದಗಳು ತಿಳಿಸುತ್ತೇನೆ. ಜೊತೆಗೆ ಹೊಸದಾಗಿ ಆಯ್ಕೆಯಾಗಿ ಬಂದಂತಹ ಸಚಿವರಿಗೆ ಶಾಸಕರಿಗೆ ಸಂಘದ ಪರವಾಗಿ ಅಭಿನಂದಿಸಲಾಯಿತು.

ಇಂತಹ ಎಲ್ಲ ಕಾರ್ಯಕ್ರಮಗಳ ಜೊತೆಗೆ ದೆಹಲಿ ಕರ್ನಾಟಕ ಸಂಘ ಬರುವ ದಿನಗಳಲ್ಲಿ ಒಂದು ದಾಖಲೆಯ ಕೆಲಸಕ್ಕೆ ಕೈ ಹಾಕಿದ್ದೇವೆ ಅದೇನೆಂದರೆ ಕರ್ನಾಟಕದಿಂದ ಉನ್ನತ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿಗಳಿಗೆ ವಸತಿ ನಿಲಯವನ್ನು ಮಾಡಬೇಕೆಂದು ದೆಹಲಿಯ ಪಕ್ಕದಲ್ಲಿ ಇರುವ ನೋಯ್ಡಾದಲ್ಲಿ ಜಾಗವನ್ನ ತೆಗೆದು ಸುಮಾರು 300 ರಿಂದ 400 ವಿದ್ಯಾರ್ಥಿಗಳು ಉಳಿಯುವಂತಹ ವಸತಿ ನಿಲಯ ಮಾಡಬೇಕೆಂದು ಈ ಅಮೃತ ಮಹೋತ್ಸವದಲ್ಲಿ ಪಣತೊಟ್ಟಿದ್ದೇವೆ ಇದಕ್ಕೆ ಎಲ್ಲಾ ಕೆಲಸಗಳು ಜರುಗುತ್ತಿವೆ. ಈಗಾಗಲೇ ಉತ್ತರ ಪ್ರದೇಶದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಯೋಗಿ ಆದಿತ್ಯನಾಥರವರನ್ನ ಭೇಟಿ ಮಾಡಿ ಅವರಿಗೆ ಮನವಿಯನ್ನ ನೀಡಿದ್ದೇವೆ. ಇದು ಪರಮಪೂಜ್ಯ ಜಗದ್ಗುರುಗಳಾದ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿಗಳ ನೇತೃತ್ವದಲ್ಲಿ ಕೆಲಸ ನಡೆಯುತ್ತಿದೆ. ಬಂಧುಗಳೇ ಇದರ ಜೊತೆಗೆ ದೆಹಲಿ ಕರ್ನಾಟಕ ಸಂಘದಲ್ಲಿ ಈ ಅಮೃತ ಮಹೋತ್ಸವ ಸಂದರ್ಭದಲ್ಲಿ ಕರ್ನಾಟಕದಿಂದ ಬಂದಂತ ಎಲ್ಲಾ ಕಲಾವಿದರಿಗೆ ಸಾಹಿತಿಗಳಿಗೆ ಕಲಾಪೋಷಕರಿಗೆ ದಾಸೋಹವನ್ನು ಮಾಡಲು ಮುಂದಾಗಿದ್ದೇವೆ. ಈ ಕಾರ್ಯಕ್ರಮಗಳು ಸಹ ಜರುಗಲಿವೆ. ಮುಂಬರುವ ದಿನಗಳಲ್ಲಿ ಅತ್ಯಂತ ಸುಂದರವಾದ ಅತ್ಯಂತ ಪ್ರಬುದ್ಧವಾದ ನಾಟಕೋತ್ಸವವನ್ನು ಕರ್ನಾಟಕದಿಂದ ಕಲಾವಿದರನ್ನು ಕರೆಸಿ ಮಾಡಲಿದ್ದೇವೆ ಇಂತಹ ಎಲ್ಲಾ ಕಾರ್ಯಕ್ರಮಗಳಿಗೆ ತಾವು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಭಾಗಿಯಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಪ್ರಾರ್ಥನೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದಂತಹ ಅಮೃತ ಮಹೋತ್ಸವ ಸಂಭ್ರಮ ಕಾರ್ಯಕ್ರಮಕ್ಕೆ ತಾವುಗಳೆಲ್ಲ ಬಂದು ಅತಿ ಹೆಚ್ಚು ಸಂಖ್ಯೆಯಲ್ಲಿ ಭಾಗಿಯಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದಕ್ಕೆ ಎಲ್ಲಾ ಕನ್ನಡ ಬಂಧುಗಳಿಗೆ ಅನಂತ ಅನಂತ ಧನ್ಯವಾದಗಳು ತಿಳಿಸುತ್ತೇನೆ

*ಸಿ.ಎಂ. ನಾಗರಾಜ*
ಅಧ್ಯಕ್ಷರು

## ಮುನ್ನೋಟ

ಆತ್ಮೀಯರೇ,

ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಿಗೆ, ಬೇಸಿಗೆ ಬಿಸಿಲು ಹಾಗೂ ರಜಾ ಕಾರಣಗಳಿಂದಾಗಿ ಸ್ವಲ್ಪ ಮಟ್ಟಿಗೆ ಬ್ರೇಕ್ ಬಿದ್ದಿದೆ. ಈ ನಡುವೆ 10ನೇ ಹಾಗೂ 12ನೇ ತರಗತಿಗಳ ಫಲಿತಾಂಶ ಹೊರಬಂದಿವೆ. ನಮ್ಮ ದೆಹಲಿ ಕನ್ನಡಿಗರ ಮಕ್ಕಳು ಅತ್ಯಂತ ಸಫಲ ಫಲಿತಾಂಶನ್ನು ಪಡೆದು ತೇರ್ಗಡೆಯಾಗಿರುವುದು ಅತ್ಯಂತ ಸಂತಸದ ವಿಷಯ. ಈ ಸಾಧನೆಗೈದ ಎಲ್ಲ ಮಕ್ಕಳು ಹಾಗೂ ಅವರ ತಂದೆ ತಾಯಿಯರಿಗೆ ಹೃತ್ಪೂರ್ವಕ ಅಭಿನಂದನೆಗಳು.

ನಮ್ಮ ನಿಮ್ಮೆಲ್ಲರ ಪ್ರೀತಿಯ ಕನ್ನಡ ಶಾಲೆಯು ಸಹ ಪ್ರತೀ ಬಾರಿಯಂತೆ ಈ ಬಾರಿಯೂ ಉತ್ತಮ ಫಲಿತಾಂಶ ನೀಡಿ, ಸರ್ಕಾರಿ/ಸರ್ಕಾರಿ ಅನುದಾನಿತ ಶಾಲೆಗಳ ಪೈಕಿ ಸಾಧನೆಗೈದ ಶಾಲೆಗಳ ಪಟ್ಟಿಯಲ್ಲಿರುವುದೂ ನಮ್ಮೆಲ್ಲರಿಗೆ ಹೆಮ್ಮೆಯ ವಿಷಯ. ಶಾಲಾ ಆಡಳಿತ ಮಂಡಳಿ, ಮಕ್ಕಳು ಹಾಗೂ ಶಿಕ್ಷಕರಿಗೆ ವಿಶೇಷ ಅಭಿನಂದನೆಗಳು.

‘ಸಾಧನೆಯ ಹಾದಿ ಸುಗಮವಾಗಲಿ,
ಸಾಧನೆಯ ಶಿಖರ ನಮದಾಗಲಿ’

**“ಸಿರಿಗನ್ನಡಂ ಗೆಲ್ಗೆ”**

**ಆರ್.ರೇಣುಕುಮಾರ್**
**ಪ್ರಧಾನ ಕಾರ್ಯದರ್ಶಿ**

# ದೆಹಲಿ ಕರ್ನಾಟಕ ಸಂಘ

ರಾವ್ ತುಲಾರಾಮ್ ಮಾರ್ಗ, ಸೆಕ್ಟರ್-12, ಆರ್.ಕೆ. ಪುರಂ, ನವದೆಹಲಿ-110022

ಮಾನ್ಯರೆ,


2022-23ರ ಶೈಕ್ಷಣಿಕ ವರ್ಷದಲ್ಲಿ 10 ಮತ್ತು 12 ನೇ ತರಗತಿಯಲ್ಲಿ ಶೇ 95 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ವಿವರವನ್ನು ಅಭಿಮತದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಆದ್ದರಿಂದ ಶೇ 95 ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಸಂಘದ ಸದಸ್ಯರ ಮಕ್ಕಳ ಅಂಕಪಟ್ಟಿ , ಭಾವಚಿತ್ರ, ಮುಂತಾದ ವಿವರವನ್ನು ದಿನಾಂಕ 20.06.2023 ಕ್ಕಿಂತ ಮೊದಲು ಸಂಘದ ಇಮೇಲ್ : dksangha@gmail.com ಗೆ ಕಳುಹಿಸಿಕೊಡಬೇಕಾಗಿ ವಿನಂತಿ.

**ಸಿ.ಎಂ. ನಾಗರಾಜ**
**ಅಧ್ಯಕ್ಷರು**

**ಆರ್. ರೇಣುಕುಮಾರ್**
**ಪ್ರಧಾನ ಕಾರ್ಯದರ್ಶಿ**

# ಪುರುಷೋತ್ತಮ ಬಿಳಿಮಲೆಯವರ ‘ಕಾಗೆ ಮುಟ್ಟಿದ ನೀರು’

## ಆತ್ಮಕಥನದ ಕುರಿತು ಮೈಸೂರಿನ ನಾ ದಿವಾಕರ್ ಬರೆದ ಲೇಖನ




‘ಆರಂಭದಿಂದ ತಮ್ಮ ಬದುಕಿನ ಚಿತ್ರಣಗಳನ್ನು ಭಾವಚಿತ್ರಗಳ ಮೂಲಕ ಕಣ್ತುಂಬಿಕೊಳ್ಳುವಂತೆ ಮಾಡುವ ಬಿಳಿಮಲೆಯವರು ನಂತರದ ಕೆಲವು ಪುಟಗಳಲ್ಲಿ ಮೌಢ್ಯ ಮತ್ತು ಅಜ್ಞಾನದ ವಿರುದ್ಧ ತಮ್ಮ ಪ್ರತಿರೋಧದ ದನಿಯ ಪರಿಚಯ ಮಾಡಿರುವುದೂ ಸಹ ಇಂದಿನ ಅಧ್ಯಯನಶೀಲ ವಿದ್ಯಾರ್ಥಿ–ಅಧ್ಯಾಪಕ ವೃಂದಕ್ಕೆ ಮಾರ್ಗದರ್ಶಿಯಾಗಬೇಕು. ಬೌದ್ಧಿಕವಾಗಿ ಯಶಸ್ಸಿನ ಶಿಖರವೇರುತ್ತಲೇ ಹೋಗುವ ಬಿಳಿಮಲೆಯವರು ದೈಹಿಕವಾಗಿ ಎದುರಿಸಿದ ಅನಾರೋಗ್ಯದ ಸಮಸ್ಯೆಗಳನ್ನು ಬಿಚ್ಚಿಡುತ್ತಾ ಹೋದಂತೆ ಬಿಟ್ಟಕಣ್ಣು ಬಿಟ್ಟಂತೆ, ಸೋಜಿಗ, ಅಚ್ಚರಿ ಮತ್ತು ಆತಂಕದಿಂದ ಓದುವಂತಾಗುತ್ತದೆ. ಹಾಗೆಯೇ ತೆರೆದ ಕಣ್ಣುಗಳು ತೇವವಾದರೂ ಅಚ್ಚರಿಯೇನಿಲ್ಲ’

**ವಾಟೆಕಜೆಯ ಕಾಮನಬಿಲ್ಲು ದೆಹಲಿಯಲಿ ಕಂಡಾಗ**

ಕಾಮನಬಿಲ್ಲು ಎಲ್ಲ ಓರಿಗೆಯವವರನ್ನೂ ಸೆಳೆಯುವ ಒಂದು ವಿಸ್ಮಯಕಾರಿ ವಿದ್ಯಮಾನ. ಎಳೆಯ ವಯಸ್ಸಿನಲ್ಲಿದ್ದಾಗ, ಆಕಾಶದಲ್ಲಿ ಹಠಾತ್ತನೆ ಮೂಡುವ ಈ ರಂಗುರಂಗಿನ ಚಿತ್ತಾರ, ಅದರ ಬಿಲ್ಲಿನ ಆಕಾರ ಮತ್ತು ಗಗನದಲ್ಲಿ ಆ ತುದಿಯಿಂದ ಈ ತುದಿಯವರೆಗೂ ಹರಡಿದಂತೆ ಕಾಣುವ ಕಾಮನಬಿಲ್ಲನ್ನು ಪೂರ್ತಿಯಾಗಿ ನೋಡಲು ಮಹಡಿಯ ಮೇಲೆ ಹೋಗುತ್ತಿದ್ದುದುಂಟು. ಇದನ್ನು ಇಂದ್ರನ ಧನಸ್ಸು ಎಂಬ ನಂಬಿಕೆ ಅಂದಿಗೂ ಇತ್ತು ಇಂದಿಗೂ ಇದೆ. ಅದೇನೇ ಇರಲಿ, ಈ ವಿಸ್ಮಯ ಈಗ ನೆನಪಾದ ಕಾರಣ ಪುರುಷೋತ್ತಮ ಬಿಳಿಮಲೆಯವರ ಆತ್ಮಕಥನ ‘ಕಾಗೆ ಮುಟ್ಟಿದ ನೀರು’ ಕೃತಿಯ ಎರಡನೆಯ ಓದು. ಮೊದಲ ಓದಿನ ನಂತರವೇ ಬರೆಯಬೇಕಿದ್ದ ಅಕ್ಷರಗಳು ಕಾರಣಾಂತರಗಳಿಂದ ನನ್ನೊಳಗಿನ ವಿಸ್ಮೃತಿಗೆ ಬಲಿಯಾಗಿದ್ದವು.

ಬಿಳಿಮಲೆಯವರ ಆತ್ಮದ ತುಣುಕುಗಳು ಚದುರಿ ಬಿದ್ದಿವೆ, ಆಯ್ದುಕೊಳ್ಳಲು ಸಾಧ್ಯವೇ ಎಂದು ಯೋಚಿಸಿ ಮುನ್ನಡೆದರೆ ನಮ್ಮ ಸೊಂಟ ಬಿದ್ದುಹೋಗಿರುತ್ತದೆ. ಕರ್ನಾಟಕದ ಮಲೆನಾಡಿನ ಮಡಿಲಲ್ಲಿರುವ ವಾಟೆಕಜೆ ಎಂಬ ಸಣ್ಣ ಗ್ರಾಮದ ಹುಡುಗ, ರೋಯ್ತಾ, ಪಶ್ಚಿಮ ಘಟ್ಟಗಳ ಗಗನಚುಂಬಿ ವೃಕ್ಷಗಳಂತೆ ಬೆಳೆಯುತ್ತಲೇ ಹೋಗಿ, ಬೌದ್ಧಿಕವಾಗಿ ವಿಸ್ತರಣೆ ಹೊಂದುತ್ತಾ ವಿಶ್ವ ಪರ್ಯಟನೆಯ ಹೊಸ ಅನುಭವವನ್ನು ಓದುಗರ ಮುಂದಿಡುವ ಈ ಕೃತಿ ನಮ್ಮನ್ನು ಎಷ್ಟು ಆಳಕ್ಕೆ ಕರೆದೊಯ್ಯುತ್ತದೆ ಎಂದರೆ, ಮಲೆನಾಡಿನ ಏರಿಳಿತಗಳಲ್ಲಿ ನಡೆದುಹೋದಂತಹ ಅನುಭವವಾಗುತ್ತದೆ. ಬದುಕಿನ ಪಯಣದಲ್ಲಿ ಗುರಿ ಮುಟ್ಟುವುದು ಎಂದರೆ ಕೇವಲ ಸಾಧನೆ, ಪ್ರಶಸ್ತಿ ಫಲಕ, ಸನ್ಮಾನ, ಅಭಿನಂದನೆ ಮಾತ್ರವೇ ಅಲ್ಲ, ಅಲ್ಲಿ ಪರಿಶ್ರಮ, ಬದ್ಧತೆ, ಕಾರ್ಯಕ್ಷಮತೆ ಮತ್ತು ಧ್ಯೇಯಸಾಧನೆಯ ಛಲ ಇವೆಲ್ಲವೂ ಮುಖ್ಯ ಎನ್ನುವುದಕ್ಕೆ ಸಾಕ್ಷಿಯಾಗಿ ನಿಲ್ಲುವ ಪಯಣ ಬಿಳಿಮಲೆಯವರದು.

ಬದುಕು ಅನುಭವ ಮತ್ತು ಅನುಭಾವದ ಗುಚ್ಚ. ಹೂಗುಚ್ಚವೇ ಆಗಬೇಕಿಲ್ಲ. ಅಲ್ಲೊಂದು ಇಲ್ಲೊಂದು ಮುಳ್ಳು ಅಥವಾ ಹುಲ್ಲು ಕಡ್ಡಿಗಳೂ ಇರಲು ಸಾಧ್ಯ. ಈ ಅನುಭವಗಳು ನಮ್ಮ ಜೀವನವನ್ನು ರೂಪಿಸುತ್ತಾ ಹೋದಂತೆ ಪಯಣದ ಹಾದಿಯಲ್ಲಿ ನಾವೇ ಹೆಕ್ಕಿಕೊಳ್ಳುವ ಅಥವಾ ಸಿಲುಕಿಕೊಳ್ಳುವ ಸಾಂದರ್ಭಿಕ ತುಣುಕುಗಳು ನಮ್ಮ ಅನುಭಾವದ ನೆಲೆಯನ್ನು ವಿಸ್ತರಿಸುತ್ತಾ, ಬದುಕಿನ ಒಂದು ಸ್ಪಷ್ಟ ನೆಲೆಗೆ ತಂದು ನಿಲ್ಲಿಸಿಬಿಡುತ್ತವೆ. ಬಿಳಿಮಲೆಯವರ ಈ ಶೋಧ ಮತ್ತು ಪರಿಶೋಧದ ಪಯಣ ಅವರ ವಿಶಿಷ್ಟ ಬದುಕಿನ ಅನುಭಾವದಂತೆ ಕಾಣುತ್ತದೆ. ಬದುಕಿನುದ್ದಕ್ಕೂ ಸವಾಲುಗಳನ್ನು, ಸಂಘರ್ಷಗಳನ್ನು ಎದುರಿಸುತ್ತಲೇ ಗುರಿಯತ್ತ ಸಾಗುವಾಗ ಒಬ್ಬ ವ್ಯಕ್ತಿ ಏನೆಲ್ಲಾ ಸಂದರ್ಭಗಳನ್ನು ಎದುರುಗೊಳ್ಳಬಹುದು ಎನ್ನುವುದಕ್ಕೆ ‘ಕಾಗೆ ಮುಟ್ಟಿದ ನೀರು’ ಪ್ರಾತ್ಯಕ್ಷಿಕೆಯಂತೆ ಕಾಣುತ್ತದೆ.

ಈ ಪ್ರಾತ್ಯಕ್ಷಿಕೆಯನ್ನು ಕೃತಿಕಾರ ಬಿಳಿಮಲೆಯವರು ಯಾವುದೇ ನೋವಿನ ಛಾಯೆ ಇಲ್ಲದೆ, ಆತ್ಮರತಿಯಿಲ್ಲದೆ, ನಿಸ್ಪೃಹತೆಯಿಂದ ಓದುಗರ ಮುಂದೆ ಅನಾವರಣಗೊಳಿಸುತ್ತಾ ಹೋಗುತ್ತಾರೆ. ಮಲೆನಾಡಿನ ಬೆಟ್ಟಗಳ ತಪ್ಪಲಲ್ಲಿ, ಘಟ್ಟಗಳ ನಡುವೆ ಬಿಳಿಮಲೆಯವರ ಬಾಲ್ಯದ ನಡಿಗೆಯನ್ನು ಗಮನಿಸುತ್ತಾ ಹೋದರೆ, ಈ ಪ್ರಾಕೃತಿಕ ಸಿರಿಯ ನಡುವೆಯೂ ಬಡತನ, ಸಂಕಷ್ಟಗಳು ಹೇಗಿರುತ್ತದೆ ಎನ್ನುವುದರ ದರ್ಶನವಾಗುತ್ತದೆ.

ಕುಟ್ಟಬ್ಯಾರಿ ಎಂಬ ಅಲೆಮಾರಿ ವ್ಯಾಪಾರಿಯ ಬವಣೆ ಮತ್ತು ಆತನಿಗೆ ಕೊನೆಗೂ ದೊರೆಯದ ಐದು ಸೆಂಟ್ ಭೂಮಿ ಓದುಗರ ಮನದಲ್ಲಿ ನಾಟುವಂತಿದೆ. ಅವಕಾಶವಂಚಿತರ ಬಗ್ಗೆ ಸಹಾನುಭೂತಿ ಮೂಡಿ ಜೀವನಪರ್ಯಂತ ಉಳಿದುಕೊಳ್ಳುವಲ್ಲಿ ಬದುಕಿನ ಇಂತಹ ಘಟನೆಗಳು ಪ್ರಮುಖ ಪಾತ್ರ ವಹಿಸುವುದನ್ನು ಬಿಳಿಮಲೆಯವರ ಬದುಕಿನಲ್ಲೂ ಕಾಣಬಹುದು.

25 ಪೈಸೆ ಕಳೆದುಕೊಂಡ ಬಾಲಕನೊಬ್ಬನ ವೇದನೆ ಮತ್ತು ನೋವು ಇಂದು ಸಾವಿರಗಟ್ಟಲೆ ಕಳೆದುಕೊಳ್ಳುವ ಮಕ್ಕಳಿಗೆ ಅರ್ಥವಾಗುವುದೋ ಇಲ್ಲವೋ. ಆದರೆ ಬಿಳಿಮಲೆಯವರ ಅನುಭವದ ನೆಲೆಯಲ್ಲಿ ನಿಂತು ನೋಡುವ ತುರ್ತು ಇಂದಿನ ಪೀಳಿಗೆಗೆ ಇದೆ. ಇದು ನಮ್ಮೆಲ್ಲರ ಅನುಭವವೂ ಹೌದು. ಹಣದ ಮೌಲ್ಯಕ್ಕಿಂತಲೂ ಅದರ ಭಾವನಾತ್ಮಕ ಮೌಲ್ಯ ಹೆಚ್ಚು ಎನ್ನುವ ಸಂದೇಶವನ್ನು ಈ ಘಟನೆ ನೀಡುತ್ತದೆ. ಸೃಜನಶೀಲ ವ್ಯಕ್ತಿಯೊಬ್ಬರ ಆತ್ಮಕಥನದಲ್ಲಿ ಕಾಣುವ ಇಂತಹ ಸೂಕ್ಷ್ಮಗಳು ಬದುಕು ಕಟ್ಟಿಕೊಳ್ಳುವವರಿಗೆ ಚೈತನ್ಯ ಒದಗಿಸುವುದು ಸಹಜ. ಸಹೋದರಿಯೊಡಗಿನ ತುಂಟಾಟ, ದುಷ್ಟ ಪಟ್ಟ ಮತ್ತು ರಂಪಾಟಗಳ ನಡುವೆಯೇ ಸಾಹಿತ್ಯಾಸಕ್ತಿ ಬೆಳೆಸಿಕೊಂಡ ಬಿಳಿಮಲೆಯವರು ಇಂದಿಗೂ ತಮ್ಮ ವಿಶಿಷ್ಟ ಸಾಹಿತ್ಯ ಪರಂಪರೆಯನ್ನು ಕಾಪಾಡಿಕೊಂಡು ಬರುವುದರಲ್ಲಿ ಅವರ ತಾಯಿಯವರ ಮತ್ತು ಬಾಲ್ಯದ ಗುರುಗಳ ಪಾತ್ರ ಇರುವುದನ್ನು ಇಂದಿನ ಪ್ರತಿಯೊಬ್ಬ ಪೋಷಕರೂ ಗಮನಿಸಬೇಕು.

ಸಾಧಕರ ಆತ್ಮಕಥನ ಇಲ್ಲಿಯೇ

ಮುಖ್ಯವಾಗುವುದು. ತಮ್ಮ ಬದುಕಿನ ಏರಿಳಿತಗಳನ್ನು ಹೇಳುತ್ತಲೇ ಭವಿಷ್ಯದ ಪೀಳಿಗೆಗೆ ಒಂದು ಸಂವೇದನಾಶೀಲ ಸಂದೇಶವನ್ನು ನೀಡುತ್ತಾ ಹೋಗುವ ಪರಿ ಇಡೀ ಕೃತಿಯಲ್ಲಿ ಎದ್ದುಕಾಣುತ್ತದೆ. ಹಾಗೆಯೇ ಪ್ರತಿಯೊಂದು ಸಾಧನೆಯ ಹಿಂದೆಯೂ ಒಂದು ಸ್ಫೂರ್ತಿದಾಯಕ, ಚೈತನ್ಯಯುತ ಹೃದಯ ಇರುತ್ತದೆ ಎನ್ನುವುದನ್ನೂ ಬಿಳಿಮಲೆಯವರ ಬದುಕಿನ ಒಡನಾಟದಲ್ಲಿ ಕಾಣಬಹುದು. ವಿವೇಕ ರೈ ಅವರಿಂದ ಹಿಡಿದು ಅಮೃತ ಸೋಮೇಶ್ವರರವರೆಗೆ ತಮ್ಮ ಗುರುಪರಂಪರೆಯನ್ನು ಬಹಳ ಭಾವುಕತೆಯಿಂದ, ದೈವೀಕ ಭಾವದಲ್ಲಿ ಸ್ಮರಿಸುವ ಬಿಳಿಮಲೆಯವರು ತಮ್ಮ ಸಾಧನೆಯ ಪ್ರತಿಯೊಂದು ಹೆಜ್ಜೆಯನ್ನೂ ಈ ಚೇತನಗಳಿಗೆ ಅರ್ಪಿಸುವ ಪರಿ ನಿಜಕ್ಕೂ ಉಲ್ಲೇಖನಾರ್ಹ.

ಬದುಕಿನ ಪಯಣದಲ್ಲಿ ಗುರಿ ಮುಟ್ಟುವುದು ಎಂದರೆ ಕೇವಲ ಸಾಧನೆ, ಪ್ರಶಸ್ತಿ ಫಲಕ, ಸನ್ಮಾನ, ಅಭಿನಂದನೆ ಮಾತ್ರವೇ ಅಲ್ಲ, ಅಲ್ಲಿ ಪರಿಶ್ರಮ, ಬದ್ಧತೆ, ಕಾರ್ಯಕ್ಷಮತೆ ಮತ್ತು ಧ್ಯೇಯಸಾಧನೆಯ ಛಲ ಇವೆಲ್ಲವೂ ಮುಖ್ಯ ಎನ್ನುವುದಕ್ಕೆ ಸಾಕ್ಷಿಯಾಗಿ ನಿಲ್ಲುವ ಪಯಣ ಬಿಳಿಮಲೆಯವರದು.

ಅಮೆರಿಕನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್ ಸಂಸ್ಥೆಯಲ್ಲಿನ ಹದಿನಾರು ವರ್ಷಗಳ ಸೇವಾವಧಿಯಲ್ಲಿ ಸೃಜನಶೀಲ ಸಂಶೋಧಕರಾಗಿ ಬಿಳಿಮಲೆಯವರು ತಮ್ಮೊಳಗಿನ ಪ್ರತಿಭೆ, ವಿದ್ವತ್ತು ಮತ್ತು ದಕ್ಷತೆಯನ್ನು ಸಾಹಿತ್ಯ ಕೃಷಿಗೆ ಬಳಸಿರುವುದು ಕನ್ನಡ ಸಾಹಿತ್ಯ ಲೋಕವನ್ನು ಮತ್ತಷ್ಟು ಸಮೃದ್ಧಿಗೊಳಿಸಿದೆ. ಎಲ್ಲೇ ಇರು ಹೇಗೇ ಇರು ಎಂದೆಂದಿಗೂ ನೀ ಕನ್ನಡವಾಗಿರು ಎಂಬ ಕವಿವಾಣಿಯನ್ನು ಸಾಕ್ಷಾತ್ಕರಿಸಲು ಬಿಳಿಮಲೆಯವರು ಹೊರನಾಡಿನ ಸಂಸ್ಥೆಗಳನ್ನು ಭೂಮಿಕೆಯಾಗಿ ಬಳಸಿರುವುದು ನಿಜಕ್ಕೂ ಅನುಕರಣೀಯ. ಸಾಹಿತ್ಯ, ಸಂಗೀತ, ಯಕ್ಷಗಾನ, ನಾಟಕ, ಕಾವ್ಯ, ಅಂಕಣಬರಹ ಹೀಗೆ ಅಕ್ಷರ ಲೋಕದ ಎಲ್ಲ ಆಯಾಮಗಳಲ್ಲೂ ತಮ್ಮ ವಿದ್ವತ್ ಪ್ರದರ್ಶನ ಮಾಡುವ ಮೂಲಕ ಬಿಳಿಮಲೆಯವರು ದೆಹಲಿಯ ಕರ್ನಾಟಕ ಸಂಘದ ಪುನರುಜ್ಜೀವನಕ್ಕಾಗಿ ವಹಿಸಿದ ಶ್ರಮ ಇಂದಿನ ಯುವ ವಿದ್ವತ್ ವಲಯ ಗಮನಿಸಲೇಬೇಕು. ಇಂತಹ ಸಾಧಕರ ಶ್ರಮದಿಂದಲೇ ಕನ್ನಡ ಸಾಹಿತ್ಯ ತನ್ನ ಜೀವಂತಿಕೆಯನ್ನು ಉಳಿಸಿ, ಬೆಳೆಸಿ, ವ್ಯಾಪಿಸಲು ಸಾಧ್ಯವಾಗುತ್ತಿದೆ ಎನ್ನುವುದನ್ನೂ ಹೆಮ್ಮೆಯಿಂದ ಹೇಳಬಹುದು.

'ಕಾಗೆ ಮುಟ್ಟಿದ ನೀರು' ಕೃತಿಯಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ಬಿಳಿಮಲೆಯವರ ವಿದೇಶ ಪ್ರವಾಸಗಳು. ಆತ್ಮಕಥನದಲ್ಲೊಂದು ಪ್ರವಾಸ ಕಥನ ಎನ್ನುವಂತೆ ತಾವು ಭೇಟಿ ನೀಡಿದ ಎಲ್ಲ ದೇಶಗಳ ಸ್ಮಾರಕಗಳನ್ನು, ಇತಿಹಾಸ ಪ್ರಸಿದ್ಧ ಸ್ಥಳಗಳನ್ನು ವಿವರಿಸುತ್ತಾ ಹೋಗುವ ಬಿಳಿಮಲೆಯವರು ನಮ್ಮನ್ನೂ ಸಹ ಅಲ್ಲಿಗೇ ಕರೆದೊಯ್ಯುತ್ತಿದ್ದಾರೇನೋ ಎನಿಸುತ್ತದೆ. ಅರಬ್ ರಾಷ್ಟ್ರಗಳು, ಇಸ್ರೇಲ್, ಬೆಲ್ಜಿಯಂ, ಹೊನಲುಲು, ಅಮೆರಿಕ, ಟೋಕಿಯೋ ಹೀಗೆ ಕಲೆ ಮತ್ತು ಸಾಹಿತ್ಯದ ಪರಿವ್ರಾಜಕರಂತೆ ಪರ್ಯಟನೆ ಮಾಡಿರುವ ಬಿಳಿಮಲೆಯವರ ಅಲ್ಲಿನ ಅನುಭವಗಳು ಕೇವಲ ಪ್ರವಾಸ ಕಥನವಾಗಿರದೆ, ಆಯಾ ದೇಶಗಳ ಜನಸಂಸ್ಕೃತಿ, ಆಹಾರ ಪದ್ಧತಿ, ಸಾಮಾಜಿಕ ಒಳನೋಟಗಳನ್ನು ಪರಿಚಯಿಸುವ ಒಂದು ಸುದೀರ್ಘ ಪಯಣದಂತೆ ಕಾಣುತ್ತದೆ.

ಆರಂಭದಿಂದ ತಮ್ಮ ಬದುಕಿನ ಚಿತ್ರಣಗಳನ್ನು ಭಾವಚಿತ್ರಗಳ ಮೂಲಕ ಕಣ್ತುಂಬಿಕೊಳ್ಳುವಂತೆ ಮಾಡುವ ಬಿಳಿಮಲೆಯವರು ನಂತರದ ಕೆಲವು ಪುಟಗಳಲ್ಲಿ ಮೌಢ್ಯ ಮತ್ತು ಅಜ್ಞಾನದ ವಿರುದ್ಧ ತಮ್ಮ ಪ್ರತಿರೋಧದ ದನಿಯ ಪರಿಚಯ ಮಾಡಿರುವುದೂ ಸಹ ಇಂದಿನ ಅಧ್ಯಯನಶೀಲ ವಿದ್ಯಾರ್ಥಿ–ಅಧ್ಯಾಪಕ ವೃಂದಕ್ಕೆ ಮಾರ್ಗದರ್ಶಿಯಾಗಬೇಕು. ಬೌದ್ಧಿಕವಾಗಿ ಯಶಸ್ಸಿನ ಶಿಖರವೇರುತ್ತಲೇ ಹೋಗುವ ಬಿಳಿಮಲೆಯವರು ದೈಹಿಕವಾಗಿ ಎದುರಿಸಿದ ಅನಾರೋಗ್ಯದ ಸಮಸ್ಯೆಗಳನ್ನು ಬಿಚ್ಚಿಡುತ್ತಾ ಹೋದಂತೆ ಬಿಟ್ಟಕಣ್ಣು ಬಿಟ್ಟಂತೆ, ಸೋಜಿಗ, ಅಚ್ಚರಿ ಮತ್ತು ಆತಂಕದಿಂದ ಓದುವಂತಾಗುತ್ತದೆ. ಹಾಗೆಯೇ ತೆರೆದ ಕಣ್ಣುಗಳು ತೇವವಾದರೂ ಅಚ್ಚರಿಯೇನಿಲ್ಲ. ಮೂವತ್ತು ದಾಟಿದ ನಂತರ ಕಾಡಲಾರಂಭಿಸುವ ಮೂವರು ಪತಿಗಳು, ಈ ಪತಿಗಳ ಜನಕ ಮಧುಮೇಹ, ಮೂತ್ರಪಿಂಡ ಕಸಿ ಮಾಡುವ ಹಂತದವರೆಗೂ ವ್ಯಾಪಿಸಿ ಹೃದಯದಲ್ಲಿ ಸ್ಟೆಂಟ್ ಹಾಕುವಲ್ಲಿಗೆ ಕರೆದೊಯ್ಯುವುದನ್ನು ಓದುತ್ತಿರುವಾಗ ನಿಜಕ್ಕೂ ಬಿಳಿಮಲೆ ಒಬ್ಬ ಸ್ಟಂಟ್ ಮ್ಯಾನ್ ಆಗಿಯೇ ಕಾಣುತ್ತಾರೆ.

ಬಾಲ್ಯದಿಂದಲೂ ಒಂದಲ್ಲಾ ಒಂದು ಅನಾರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಲೇ ದೇಶ ವಿದೇಶಗಳನ್ನು ಸುತ್ತಿ ತಮ್ಮೊಳಗಿನ ಸಾಹಿತ್ಯಕ, ಕಲಾತ್ಮಕ ಮತ್ತು ಸಂಶೋಧಕ ಅಭಿವ್ಯಕ್ತಿಗೆ ಒಂದು ಆಯಾಮವನ್ನು ಕಲ್ಪಿಸಿಕೊಳ್ಳುವಲ್ಲಿ ಬಿಳಿಮಲೆಯವರು ತಮ್ಮೊಳಗಿನ ಬೌದ್ಧಿಕ ಸಾಮರ್ಥ್ಯ ಮತ್ತು ಮನೋಬಲವನ್ನು ಬಿಂಬಿಸುತ್ತಾರೆ. ಆರಂಭದಿಂದ ಕೊನೆಯ ಅಧ್ಯಾಯದವರೆಗೂ ಓದಿದ ನಂತರ ಈ ಕಹಿ ಅನುಭವಗಳನ್ನು ಓದುತ್ತಾ ಹೋದಂತೆಲ್ಲಾ, 'ಇಷ್ಟೆಲ್ಲಾ ಸಮಸ್ಯೆಗಳಿರುವ ವ್ಯಕ್ತಿಯಿಂದ ಈ ರೀತಿಯ ಸಾಧನೆ ಸಾಧ್ಯವೇ' ಎನಿಸಿದರೆ ಅಚ್ಚರಿಯೇನಿಲ್ಲ. ಇಚ್ಛಾಶಕ್ತಿಯೊಂದಿದ್ದರೆ, ಸಂಕಷ್ಟಗಳನ್ನು ಎದುರಿಸುವ ಮನೋಬಲ ಇದ್ದರೆ ಯಾವುದೂ ಅಸಾಧ್ಯವಲ್ಲ ಎನ್ನುವುದನ್ನು ಪುರುಷೋತ್ತಮ ಬಿಳಿಮಲೆಯವರು ತಮ್ಮ ಬದುಕಿನ ಪ್ರತಿಯೊಂದು ಘಟ್ಟದಲ್ಲೂ ನಿರೂಪಿಸಿರುವುದು ಸ್ತುತ್ಯಾರ್ಹ.

ಹಾಗೆಯೇ ಕಂಬಾರರೊಡನೆ ಸಂಘರ್ಷ ಮತ್ತು ಸಾಹಿತ್ಯ ಲೋಕದೊಳಗಿನ ಕೆಲವು ಅಪಭ್ರಂಶಗಳೂ ಸಹ ಈ ಕೃತಿಯಲ್ಲಿ ನುಸುಳಿದ್ದು ಇದು ಕಳೆದ ಮೂರು ನಾಲ್ಕು ದಶಕಗಳ ಬೆಳವಣಿಗೆಯ ಛಾಯೆಯಂತೆ ಕಾಣುತ್ತದೆ. ತಾವು ಎದುರಿಸಿದ ಸಂಕಷ್ಟದ ಸಂದರ್ಭಗಳು ಮತ್ತು ಅಸಹಾಯಕ ಸನ್ನಿವೇಶಗಳಿಗೆ ಕಾರಣರಾದವರನ್ನು ಕುರಿತು ನೇರಾನೇರ ಪ್ರಸ್ತಾಪಿಸುವ ಬಿಳಿಮಲೆಯವರು ಎಲ್ಲಿಯೂ ತಮ್ಮ ಅಸಹನೆಯನ್ನಾಗಲೀ, ದ್ವೇಷದ ಮನೋಭಾವವನ್ನಾಗಲೀ ಪ್ರದರ್ಶಿಸುವುದಿಲ್ಲ. ಆತ್ಮಕಥನದ ನೆಲೆಯಲ್ಲಿ ತಮ್ಮ ಮನದಾಳದ ನೋವುಗಳನ್ನು ಬಿಚ್ಚಿಡುತ್ತಲೇ ತಮ್ಮೊಳಗಿನ ನಿಸ್ಪೃಹತೆ ಮತ್ತು ನಿಸ್ವಾರ್ಥತೆಯನ್ನೂ ಅನಾವರಣಗೊಳಿಸುವ ಬಿಳಿಮಲೆಯವರ 'ಕಾಗೆ ಮುಟ್ಟಿದ ನೀರು' ಸದಾ ಸ್ಮರಣೀಯ ಎನಿಸುವ ಅದ್ಭುತ ಕಥನ. ಶಿಕ್ಷಣ, ಸಂಶೋಧನೆ, ಬೋಧನೆ, ಪ್ರವಾಸ, ಕಲೆ ಮತ್ತು ಸಾಹಿತ್ಯ, ಯಕ್ಷಗಾನ ಮತ್ತು ಸಂಘಟನೆ ಹೀಗೆ ಹಲವು ಪಯಣಗಳ ಒಂದು ಗುಚ್ಛ 'ಕಾಗೆ ಮುಟ್ಟಿದ ನೀರು'.

ಚದುರಿ ಬಿದ್ದ ಬಿಳಿಮಲೆಯವರ ಆತ್ಮದ ತುಣುಕುಗಳನ್ನು ಆಯ್ದುಕೊಳ್ಳುತ್ತಾ ಹೋಗುವುದು ಎಷ್ಟು ಕಷ್ಟ ಎಂದು ಭಾವಿಸುತ್ತಾ ಓದು ಮುಂದುವರೆಸಿದರೆ, ಕೊನೆಯ ಅಧ್ಯಾಯದಲ್ಲಿನ ಅವರ ಅನಾರೋಗ್ಯದ ಕಥನ, ಓದುಗರ ಎಲ್ಲ ಕಷ್ಟಗಳನ್ನೂ ಮರೆಮಾಡಿಬಿಡುತ್ತದೆ. ಹಾಗೆಯೇ ಕಾಮನಬಿಲ್ಲಿನ ಆದಿ ಮತ್ತು ಅಂತ್ಯವನ್ನು ಅರಸುವುದು ಕಷ್ಟ ಎಂದೂ ಅರ್ಥವಾಗುತ್ತದೆ. ನಮ್ಮ ನಡುವಿನ ಚಿಂತಕರಲ್ಲಿ, ಬೌದ್ಧಿಕ ಚೇತನಗಳಲ್ಲಿ ಒಬ್ಬರಾಗಿ ಬಿಳಿಮಲೆಯವರು ತಮ್ಮ ಈ ಕಥನಗಳ ಸರಮಾಲೆಯ ಮೂಲಕ ಭವಿಷ್ಯದ ಪೀಳಿಗೆಗೆ ಒಂದು ಮಾರ್ಗದರ್ಶಿ ಕೃತಿಯನ್ನು ಅರ್ಪಿಸಿದ್ದಾರೆ.

'ಸಾಧನೆ ಎನ್ನುವುದು ವ್ಯಕ್ತಿಗತವಾದರೂ ಸಾಧಕರ ಬದುಕು ಸಾರ್ವತ್ರಿಕತೆ ಪಡೆಯುವುದು ಇಂತಹ ಅದ್ಭುತ ವ್ಯಕ್ತಿಗಳಲ್ಲಿಯೇ ಎನಿಸುತ್ತದೆ'– 'ಕಾಗೆ ಮುಟ್ಟಿದ ನೀರು' ಸ್ಪರ್ಶಿಸಿದ ನಂತರ ಮನದಾಳದಲ್ಲಿ ಮೂಡಿದ ಮಾತುಗಳಿವು.

*ಕೃಪೆ : ನಾ.ದಿವಾಕರ್*

# ಡಾ. ಪುರುಷೋತ್ತಮ ಬಿಳಿಮಲೆ ಅವರ 'ಕಾಗೆ ಮುಟ್ಟಿದ ನೀರು'

## ಆತ್ಮಕತೆ–ಒಂದು ಅವಲೋಕನ

ದಿನಾಂಕ 14.05.2023 ರಂದು ಭಾನುವಾರ ಸಂಜೆ ದೆಹಲಿ ಕರ್ನಾಟಕ ಸಂಘ ಆಯೋಜಿಸಿದ್ದ ಡಾ. ಪುರುಷೋತ್ತಮ ಬಿಳಿಮಲೆ ಅವರ 'ಕಾಗೆ ಮುಟ್ಟಿದ ನೀರು' ಆತ್ಮಕತೆಯನ್ನು ಕುರಿತ ಅವಲೋಕನ ಕಾರ್ಯಕ್ರಮವು ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ ನಡೆಯಿತು.




ಕಳೆದ ಎರಡೂವರೆ ದಶಕಗಳಿಂದ ಹೊರನಾಡ ಕನ್ನಡಿಗನಾಗಿ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕರ್ನಾಟಕದ ನೆಲ, ಜಲ ನುಡಿ ಮತ್ತು ಸಂಸ್ಕೃತಿಗಳ ಕುರಿತು ಸಾಂಸ್ಕೃತಿಕ ರಾಯಭಾರಿಯಂತೆ ಅತ್ಯಂತ ಉತ್ಸುಕತೆಯಿಂದ ಡಾ ಬಿಳಿಮಲೆ ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು, ವಿಶೇಷವಾಗಿ ಕರಾವಳಿಯ ಯಕ್ಷಕಲೆ ಯಕ್ಷಗಾನವನ್ನೂ ಒಳಗೊಂಡಂತೆ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿದ್ದಾರೆ. ಕರ್ನಾಟಕದ ಗಡಿಯಿಂದ ಹೊರಬಂದು ದೇಶದ ಇತರೆ ಭಾಗಗಳಲ್ಲಿರುವ ಹೊರನಾಡ ಕನ್ನಡಿಗರಲ್ಲಿ ಕನ್ನಡ ನಾಡು ನುಡಿಗಳ ಹಿತರಕ್ಷಣೆ ಕುರಿತು ಸದಾ ಎಚ್ಚರಿಕೆಯ ಗಂಟೆಯನ್ನು ಬಾರಿಸುತ್ತಾ ಬರುತ್ತಿರುವ ಡಾ. ಬಿಳಿಮಲೆ ಅವರು ಜಾನಪದ ವಿದ್ವಾಂಸನಾಗಿ ಅಮೆರಿಕ, ಜಪಾನ್, ಇಸ್ರೇಲ್ ಮುಂತಾದ ದೇಶ ವಿದೇಶಗಳನ್ನು ದಣಿವರಿಯದೆ, ಸುತ್ತಿದ್ದಾರೆ.

ಇಂತಹ ಬಹುಮುಖ ಪ್ರತಿಭೆಯ ಚಿಂತಕರೂ, ಬರಹಗಾರರೂ ಆದ ಡಾ. ಬಿಳಿಮಲೆ ತಮ್ಮ ಆತ್ಮಕತೆ ಕಾಗೆ ಮುಟ್ಟಿದ ನೀರು ಕೃತಿಯಲ್ಲಿ ಅವರು ಬದುಕಿನುದ್ದಕ್ಕೂ ನಡೆದ ಹಾದಿಯ ಸಂಕೀರ್ಣತೆಯನ್ನು ನಿರ್ಲಿಪ್ತತೆಯಿಂದ, ಹಾಸ್ಯಮಯವಾಗಿ, ಬದುಕಿನ ಅನುಭವಗಳನ್ನು ಸಾದರ ಪಡಿಸಿದ ಸ್ವಾರಸ್ಯಕರ ಸಂಗತಿಯನ್ನು ಕೃತಿಯ ಅವಲೋಕನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ಶ್ರೀ ಸಿ ಎಂ ಅಂಗಡಿಯವರು ಹಿರಿಯ ನ್ಯಾಯವಾದಿಗಳು, ಸುಪ್ರೀಂ ಕೋರ್ಟ್ ನವದೆಹಲಿ ಹಾಗೂ ಪ್ರೊಫೆಸರ್ ರಂಗನಾಥ್ ಎಸ್ ಸಿಂಗಾರಿ ಮುಖ್ಯಸ್ಥರು, ವಿನ್ಯಾಸ ವಿಭಾಗ, ಡಿ ಟಿ ಯು, ನವದೆಹಲಿ ಅವರುಗಳು ಬಹಳ ಸುಂದರವಾಗಿ ವಿವರಿಸಿದರು. ಶ್ರೀ ಸಿಎಂ ಅಂಗಡಿಯವರು ಈ ಕೃತಿ ಆಡಿಯೋ ಕ್ಯಾಸೆಟ್ ಆಗಿ ಹೊರಬರಲಿ ಎಂದು ಆಶಿಸಿದರು. ಡಾ ರಂಗನಾಥ ಸಿಂಗಾರಿಯವರು ಓದುವಿನ ಬಗ್ಗೆ ಹಾಗೂ ತಮ್ಮ ತಾಯಿಯ ಬಗ್ಗೆ ಬರೆದ ಸ್ವರಚಿತ ಕವನಗಳನ್ನು ವಾಚಿಸಿದರು.

ಈ ಪುಸ್ತಕವನ್ನು ಓದಿದ ನಮಗೆ ಒಂದು ಚಲನಚಿತ್ರವನ್ನು ನೋಡಿದ ಅನುಭವವನ್ನು ಪಡೆದಂತಿತ್ತು. ಪುರುಷೋತ್ತಮ ಬಿಳಿಮಲೆಯವರ ಬಾಲ್ಯದ ಜೀವನ ಗುಡ್ಡ ಬೆಟ್ಟಗಳ ಆ ಪರಿಸರ ನಮ್ಮ ಕಣ್ಮುಂದೆ ಬಂದಂತೆ ಆಗುತ್ತಿತ್ತು. ಅಂತಹ ಒಂದು ಪುಸ್ತಕದ ಅವಲೋಕವನ್ನು ಮಾಡಲು ಸೇರಿರುವುದು ನಮ್ಮ ಸೌಭಾಗ್ಯವೆಂದರು. ಒಂದು ಪುಸ್ತಕವನ್ನು ಓದಿದಂತೆ ನಮಗೆ ಅನ್ನಿಸುವುದಿಲ್ಲವೆಂದರು. ಪುರುಷೋತ್ತಮ ಬಿಳಿಮಲೆ ಸರ್ ಅವರ ಬಗ್ಗೆ ಹೇಳುವುದಾದರೆ ಅವರೊಬ್ಬ ಸರಳ ಸಜ್ಜನತೆಯ ಒಬ್ಬ ವ್ಯಕ್ತಿ. ಇವರ ಬಗ್ಗೆ ಹೇಳಲು ಹೋದರೆ ಗಂಟೆಗಳು ಸಾಲುವುದಿಲ್ಲವೆಂದರು.

ಅಮೃತ ಮಹೋತ್ಸವ ಕಾರ್ಯಕ್ರಮ ಅಯೋಜನೆ ಮಾಡುವ ಸಿದ್ದತೆ ಗಾಗಿ ಬೆಂಗಳೂರಿಗೆ ತೆರಳಿದ್ದ ಅಧ್ಯಕ್ಷರಾದ ಶ್ರೀ ಸಿ ಎಂ. ನಾಗರಾಜರ ಅನುಪಸ್ಥಿತಿಯಲ್ಲಿ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಡಾ. ಎಂ ಎಸ್ ಶಶಿಕುಮಾರ್ ವಹಿಸಿದ್ದರು. ಸಂಘದ ಮಾಜಿ ಅಧ್ಯಕ್ಷ ಮತ್ತು ಜೆ ಎನ್ ಯು ಕನ್ನಡ ಅಧ್ಯಯನ ಪೀಠದ ಮಾಜಿ ಮುಖ್ಯಸ್ಥರೂ, ಕೃತಿಯ ರಚನಕಾರರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಡಾ ಪುರುಷೋತ್ತಮ ಬಿಳಿ ಮಲೆ ಯವರು ಮಾತನಾಡಿ, ತಮ್ಮ ಈ ಕೃತಿ ಈಗ ಆರನೇ ಮುದ್ರಣ ವಾಗುತ್ತಿರುವುದು ತಮಗೆ ಅತ್ಯಂತ ಸಂತೋಷ ತಂದಿದೆ.ಇದರಲ್ಲಿ ಬರೆದಿರುವ ಪ್ರತಿಯೊಂದು ಸಂಗತಿಗಳು, ಘಟನೆಗಳು ಸತ್ಯವಾದವು, ಈ ಕೃತಿಯ ಬಗ್ಗೆ ದೆಹಲಿ ಕರ್ನಾಟಕ ಸಂಘದಲ್ಲಿ ವಿಚಾರ ವಿಮರ್ಶೆ ಯಾಗುತ್ತಿರುವುದು ತಡವಾದರೂ ಮೆಚ್ಚುವಂತಹ ಕಾರ್ಯ. ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ ಹಾಗು ಇಲ್ಲಿ ನೆರೆದಿರುವ ಎಲ್ಲ ಕನ್ನಡಿಗರಿಗೆ ಅಭಿನಂದನೆಗಳು ಎಂದು ಹೇಳಿದರು.ಡಾ ಶಶಿ ಕುಮಾರ್ ರವರು ಕೃತಿಯ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸುತ್ತಾ . ತಮ್ಮ ಅನುಭವಗಳನ್ನು, ಜೀವನದ ಸಂಘರ್ಷಗಳನ್ನು ಹಾಗು ದೆಹಲಿ ಕರ್ನಾಟಕ ಸಂಘದ ಜೊತೆ ಹಾಕಿದ ಹೆಜ್ಜೆ ಗಳು ಹಾಗು ಒಡನಾಟಗಳನ್ನು ಹಂಚಿ ಕೊಂಡ ಡಾ ಬಿಳಿಮಲೆ ಯವರಿಗೆ ಕೃತಜ್ಞತೆ ಸಲ್ಲಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಆರ್ ರೇಣು ಕುಮಾರ್ ಅವರು ಡಾ. ಪುರುಷೋತ್ತಮ ಬಿಳಿಮಲೆ ಅವರು ಬರೆದಂತಹ ಕಾಗೆ ಮುಟ್ಟಿದ ನೀರು ಕೃತಿಯು ನಮ್ಮ ಸಂಘದ ಲ್ಲಿ ಅವಲೋಕನಗೊಳ್ಳುತ್ತಿರುವುದು ತುಂಬಾ ಸಂತೋಷ ತಂದಿದೆ. ದೆಹಲಿ ಕರ್ನಾಟಕ ಸಂಘದ, ದೆಹಲಿ ಕನ್ನಡಿಗರ ಸಾಹಿತ್ಯ ಪ್ರತಿನಿಧಿ ಡಾ ಬಿಳಿಮಲೆ ಯವರು. ಸಂಘದ ಮೂಲ ಉದ್ದೇಶ ಕನ್ನಡ ನಾಡು, ನುಡಿ, ಭಾಷೆ ಸಂಸ್ಕೃತಿ ಬಗ್ಗೆ ಅವಲೋಕನ ಮಾಡುವುದು. ಸಾಹಿತ್ಯಕ ಬೆಳವಣಿಗೆ ಆಗಬೇಕಾದರೆ ಇಂತಹ ಕಾರ್ಯಕ್ರಮಗಳು ಹೆಚ್ಚು ಆಗಬೇಕು. ಕನ್ನಡಿಗರಾದ ನಾವೆಲ್ಲ ಡಾ ಬಿಳಿಮಲೆ ಯವರು ತಮ್ಮ ಜೀವನದ ಅನುಭವವನ್ನು ಹಂಚಿಕೊಂಡ ಈ ಕೃತಿಯನ್ನು ಓದಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಂತಹ ಅತಿಥಿಗಳನ್ನು ಮತ್ತು ಕನ್ನಡ ಅಭಿಮಾನಿಗಳನ್ನು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಅವರು ಪ್ರೀತಿಪೂರ್ವಕವಾಗಿ ಸ್ವಾಗತಿಸುವ ಮೂಲಕ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರು. ಉತ್ತಮ ವಾಗ್ಮಿ, ಬರಹಗಾರ, ಜಾನಪದ ವಿದ್ವಾಂಸ ರಾದ ಡಾ ಬಿಳಿಮಲೆ ಯವರು ಒಬ್ಬ ಸರಳ ಸಜ್ಜನಿಕೆಯ ವ್ಯಕ್ತಿ. ಸಂಸ್ಕೃತದ ಸುಭಾಷಿತ ದಂತೆ ಸುಖಾತಿ ಯಾಗಿದ್ದವನು ವಿದ್ಯೆಯನ್ನು ಅಪೇಕ್ಷೆ ಮಾಡ ಬಾರದು,, ವಿದ್ಯಾರ್ಜನೆ ಮಾಡುವವನು ಸುಖ ವನ್ನು ಅಪೇಕ್ಷೆ ಪಡಬಾರದು ಎನ್ನುವುದು ಡಾ. ಬಿಳಿಮಲೆ ಅವರನ್ನು ನೋಡಿಯೇ ಮಾಡಿದಂತೆ ಅನ್ವಯಿಸುತ್ತೆ, ಈ ಪುಸ್ತಕ ವನ್ನು ಓದಿದಾಗ ಅವರ ಜೀವನವನ್ನು ಒಂದು ಮೂವಿ ನೋಡಿದಂತೆ ಅನುಭವ ತಮಗಾಯಿತು ಎಂದು ಹೇಳುತ್ತಾ ವಿಶ್ವ ತಾಯಂದಿರ ದಿನ ಅಭಿನಂದನೆಗಳನ್ನು ತಿಳಿಸಿದರು.

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ ಎಸ್ ಮೂರ್ತಿ ವಂದನಾರ್ಪಣೆ ಸಲ್ಲಿಸಿದರು. ಆಗಮಿಸಿದ್ದ ಅತಿಥಿಗಳಿಗೆ ಮತ್ತು ಡಾ. ಬಿಳಿಮಲೆ ಅವರಿಗೆ ಸಂಘದ ಪರವಾಗಿ ಗೌರವ ಸಮರ್ಪಣೆ ಮಾಡಲಾಯಿತು.

ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು ಸೇರಿದಂತೆ ಅನೇಕ ಹಿರಿಯ ದೆಹಲಿ ಕನ್ನಡಿಗರು, ಕನ್ನಡಾಭಿಮಾನಿಗಳ ಉಪಸ್ಥಿತಿಯಲ್ಲಿ 'ಕಾಗೆ ಮುಟ್ಟಿದ ನೀರು' ಈ ಕೃತಿಯ ಅವಲೋಕನ ಕಾರ್ಯಕ್ರಮವು ಯಶಸ್ವಿಗೊಂಡಿತು.

– ತಿಮ್ಮಪ್ಪ ಜಿ.ಆರ್

# ದೆಹಲಿಯ ಕೆಂಪು ಕೋಟೆಯ ಮೇಲೆ ತ್ರಿವರ್ಣ ಧ್ವಜ ಹಾರಿಸಿದ ಮಣ್ಣಿನ ಮಗ, ಮಾಜಿ ಪ್ರಧಾನಿ ಶ್ರೀ ಎಚ್.ಡಿ. ದೇವೇಗೌಡರ ಸಂದರ್ಶನ


ಸಂದರ್ಶಕರು



***ಶ್ರೀ ಚಂದ್ರಶೇಖರ ಎನ್.ಪಿ.***
ಸಂಪಾದಕರು,
ಅಮೃತ ಮಹೋತ್ಸವ ಸ್ಮರಣ ಸಂಚಿಕೆ
ಸದಸ್ಯರು, ಕಾರ್ಯಕಾರಿ ಸಮಿತಿ, ದೆ.ಕ.ಸಂಘ
ಜಂಟೀ ನಿರ್ದೇಶಕರು, ಸಂಸದ್ ಭವನ, ನವದೆಹಲಿ


"ಸ್ವಾತಂತ್ರ್ಯ ಮತ್ತು ಸಮಾನತೆಯ ಹರಿಕಾರ, ಸಮಾಜದಲ್ಲಿನ ಅಸಮಾನತೆಯನ್ನು ಜಾತಿ, ವರ್ಗದ ಅಂತರಗಳನ್ನು ಅಳಿಸಿಹಾಕಿ ಜಾತ್ಯತೀತ ಸಮಾಜ ನಿರ್ಮಾಣದ ಕನಸು ಹೊತ್ತಿದ್ದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಕನಸುಗಾರ ಶ್ರೀ ಎಚ್.ಡಿ. ದೇವೇಗೌಡರು 'ಭಾರತದ ಸೂರ್ಯ' ಎಂಬ ಪ್ರಶಸ್ತಿಗೆ ಭಾಜನರಾದ ಅಪ್ಪಟ ಮಣ್ಣಿನ ಮಗ.

ಶ್ರೀ ದೇವೇಗೌಡರು ಹುಟ್ಟಿದ್ದು ಮೇ 18, 1933ರಂದು ಕರ್ನಾಟಕದ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಹರದನಹಳ್ಳಿ ಗ್ರಾಮದಲ್ಲಿ. ಓದಿದ್ದು ಸಿವಿಲ್ ಇಂಜಿನಿಯರಿಂಗ್ ಡಿಪ್ಲೊಮಾ, ದೇವೇಗೌಡರು ಬೆಳೆದದ್ದು ಮಧ್ಯಮ ವರ್ಗದ ಕೃಷಿಕ ಕುಟುಂಬದಲ್ಲಿ. ಸಾಧಿಸಿದ್ದು ಕರುನಾಡಿನ ಮುಖ್ಯಮಂತ್ರಿ ಮತ್ತು ಭವ್ಯ ಭಾರತದ ಪ್ರಧಾನ ಮಂತ್ರಿ ಪಟ್ಟ.

20 ಹರೆಯದಲ್ಲಿಯೇ ರಾಜಕಾರಣಕ್ಕೆ ಧುಮುಕಿದ ಈಗ ತೊಂಭತ್ತರ ವಸಂತದಲ್ಲಿರುವ ದೇವೇಗೌಡರು ಅವರದ್ದು. ಮಾಗಿದ ಮನಸ್ಸು-ಬಾಗಿದ ದೇಹ.

ಪ್ರಜಾಸತ್ತಾತ್ಮಕ ವ್ಯವಸ್ಥೆಯ ಕೆಳ ಸ್ತರದಿಂದ ರಾಜಕೀಯ ಬದುಕು ಆರಂಭಿಸಿ, ಆಂಜನೇಯ ಸಹಕಾರ ಸಂಘದ ಅಧ್ಯಕ್ಷ, ಹೊಳೆನರಸೀಪುರ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯ, ಕರ್ನಾಟಕ ವಿಧಾನಸಭೆ ಸದಸ್ಯ, ವಿರೋಧ ಪಕ್ಷದ ನಾಯಕ, ಮಂತ್ರಿ, ಕರುನಾಡಿನ ಮುಖ್ಯಮಂತ್ರಿ, ಸಂಸತ್ ಸದಸ್ಯರಾಗಿ ಮಾತ್ರವಲ್ಲ, ಭವ್ಯ ಭಾರತದ ಪ್ರಧಾನ ಮಂತ್ರಿಯಾಗಿ ಹಳ್ಳಿಯಿಂದ ದಿಲ್ಲಿಯವರೆಗೆ ತಮ್ಮ ಜನಪರ, ರೈತಪರ ಹೋರಾಟ ಮತ್ತು ವಿಷಯ ವಸ್ತುವಿನ ಆಳವಾದ ಜ್ಞಾನದೊಂದಿಗೆ ಮಾಡುತ್ತಿದ್ದ ಪರಿಣಾಮಕಾರಿ ಭಾಷಣಗಳಿಂದ ತಮಗಿಂತ ಹಿರಿಯರನ್ನೂ ತಲೆದೂಗಿಸುವಂತೆ ಮಾಡುತ್ತಿದ್ದ ದೇವೇಗೌಡರು ಪಕ್ಷಾತೀತವಾಗಿ ಎಲ್ಲರ ಮೆಚ್ಚುಗೆಗೆ ಪಾತ್ರರಾದವರು.

ದೇವೇಗೌಡರು ಭಾರತದ ಆರ್ಥಿಕತೆಯ ಬೆನ್ನೆಲುಬಾಗಿರುವ ಅನ್ನದಾತನ ಬದುಕು-ಬವಣೆಗಳನ್ನು ಚೆನ್ನಾಗಿ ಅರಿತವರು. ರೈತ ಹೋರಾಟದ ಮೂಲಕವೇ ರಾಜಕೀಯ ರಂಗದಲ್ಲಿ ಹಂತ ಹಂತವಾಗಿ ಮೇಲೇರಿದವರು. 1975-76 ರ ತುರ್ತು ಪರಿಸ್ಥಿತಿ ದಿನಗಳಲ್ಲಿ ಕೇಂದ್ರ ಸರ್ಕಾರದ ಮೇಲೆ ಆಕ್ರೋಶಗೊಂಡು ಜೈಲುವಾಸ ಅನುಭವಿಸಿದವರು, ಕಾರಾಗೃಹ ವಾಸದಲ್ಲಿ ಕಳೆದ ದಿನಗಳಲ್ಲಿ ಓದುವುದಕ್ಕಾಗಿಯೇ ಹೆಚ್ಚು ಕಾಲ ತೊಡಗಿಸಿಕೊಂಡು ತಮ್ಮ ಆಸಕ್ತಿಯ ಕ್ಷೇತ್ರಗಳಲ್ಲಿ ಆಳವಾದ ಅಧ್ಯಯನ ಮಾಡಿದವರು. ವಾಸ್ತವ ಬದುಕಿನ ಅನುಭವವನ್ನು ಪುಸ್ತಕದ ಓದಿನೊಂದಿಗೆ ವಿಶ್ಲೇಷಿಸಿ ತಮ್ಮ ಜ್ಞಾನದ ಪರಿಧಿಯನ್ನು ಇನ್ನಷ್ಟು ಸಮೃದ್ಧಗೊಳಿಸಿಕೊಂಡವರು. ಆಳವಾದ ಓದುವಿಕೆಯ ಜೊತೆಗೆ ತುರ್ತು ಪರಿಸ್ಥಿತಿಯ ಆ ದಿನಗಳಲ್ಲಿ ಕಾರಾಗೃಹ ವಾಸ ಅನುಭವಿಸುತ್ತಿದ್ದ ಭಾರತದ ರಾಜಕಾರಣದ ಧುರೀಣರು, ಮುತ್ಸದ್ದಿಗಳ ಜೊತೆ ಅವರು ಬೆಳೆಸಿಕೊಂಡ ಆಪ್ತ ಒಡನಾಟ ಅವರ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ನೆರವಾಯಿತು. ಈ ಎಲ್ಲವುಗಳೂ ಜೈಲು ಬಂಧನದಿಂದ ಮುಕ್ತರಾದ ನಂತರ ಅವರೊಬ್ಬ ಈ ದೇಶದ ಭವಿಷ್ಯ ರೂಪಿಸಬಲ್ಲ ಶಕ್ತಿಯುಳ್ಳ ಒಬ್ಬ ದೃಢ ಸಂಕಲ್ಪ ಹೊಂದಿದ ವ್ಯಕ್ತಿಯಾಗಿ ಹೊರ ಹೊಮ್ಮಲು ನೆರವಾದವು. ಅವರ ಪಾಲಿಗೆ ಬಂದ ಎಲ್ಲ ಅವಕಾಶಗಳನ್ನೂ ಸಿಹಿ-ಕಹಿಗಳನ್ನೂ ಸಮ ಚಿತ್ತದಿಂದ ಸ್ವೀಕರಿಸಿ, ಸಾಮಾನ್ಯನೊಬ್ಬ ಊಹಿಸಲಾರದ ಅಸಾಮಾನ್ಯ ಸಾಧನೆ ಮಾಡಿದ ಭಾರತದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಇಡೀ ದೇಶದ ಗಮನವನ್ನು ಮಾತ್ರವಲ್ಲ ಜಗತ್ತಿನ ಗಮನವನ್ನು ಕರ್ನಾಟಕದತ್ತ ಸೆಳೆದ ಹೆಮ್ಮೆಯ ಕನ್ನಡಿಗ. ಇಂತಹ ಧೀಮಂತ ನಾಯಕ ಹೆಮ್ಮೆಯ ಕನ್ನಡಿಗ ಶ್ರೀ ಎಚ್.ಡಿ. ದೇವೇಗೌಡರ ಜೊತೆ ದೆಹಲಿ ಕರ್ನಾಟಕ ಸಂಘದ 75 ನೇ ವರ್ಷದ ಅಮೃತ ಮಹೋತ್ಸವ ಸಂಭ್ರಮಾಚರಣೆಯ ಈ ಸಂದರ್ಭದಲ್ಲಿ ನಡೆಸಿದ ವಿಶೇಷ ಸಂದರ್ಶನದ ಆಯ್ದ ಭಾಗಗಳು.



**ಸಂದರ್ಶಕರು ಪ್ರಶ್ನೆ-1 : ಸರ್, ಸಮಗ್ರ ಕರ್ನಾಟಕದ ಸಾಂಸ್ಕೃತಿಕ ಪ್ರತಿನಿಧಿಯಾಗಿ ರಾಷ್ಟ್ರ ರಾಜಧಾನಿಯಲ್ಲಿ ಕಳೆದ 75 ವರ್ಷಗಳಿಂದ ಕನ್ನಡದ ಕಂಪನ್ನು ಹರಡುತ್ತಾ ಬಂದಿರುವ ದೆಹಲಿ ಕರ್ನಾಟಕ ಸಂಘ ಅಮೃತ ಮಹೋತ್ಸವ ಸಂಭ್ರಮವನ್ನು ಆಚರಿಸಿಕೊಳ್ಳುತ್ತಿದೆ. ಈ ಸಂದರ್ಭದಲ್ಲಿ ರಾಷ್ಟ್ರ ರಾಜಕಾರಣದಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಹಿರಿಯ ರಾಜಕೀಯ ಮುತ್ಸದ್ದಿಯಾದ ನಿಮ್ಮ ಜೊತೆ ಮಾತನಾಡಿ ಕನ್ನಡ, ಕನ್ನಡಿಗ, ಕರ್ನಾಟಕಕ್ಕೆ ಸಂಬಂಧಿಸಿದಂತೆ ನಿಮ್ಮ ಅನುಭವಗಳನ್ನು ನಮ್ಮ ಸಂಘದ ಮುಖವಾಣಿ 'ಅಭಿಮತ ಪತ್ರಿಕೆ'ಯಲ್ಲಿ ದಾಖಲಿಸಲು ಬಯಸುತ್ತೇನೆ.**

**ಎಚ್.ಡಿ. ದೇವೇಗೌಡರು :** ಆಗಲಿ ಸಂತೋಷ. ಬನ್ನಿ, ಕುಳಿತುಕೊಳ್ಳಿ.

**2 : ಕನ್ನಡ ನಾಡಿನಲ್ಲಿ ಹುಟ್ಟಿ ಸ್ವತಂತ್ರ ಭಾರತದ ಹನ್ನೆರಡನೆಯ ಪ್ರಧಾನ ಮಂತ್ರಿಗಳಾಗಿ ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವವಾಗಿರುವ ಭಾರತದ ಪ್ರಧಾನಮಂತ್ರಿಯಾಗಿದ್ದ ನೀವು ಜಗತ್ತಿನ ರಾಜಕೀಯ ಭೂಪಟದಲ್ಲಿ ಕರ್ನಾಟಕವನ್ನು ಚಿರಸ್ಥಾಯಿಯಾಗಿರುವಂತೆ ಮಾಡಿದ್ದೀರಿ.**

ಅಲ್ಲದೆ ಇತ್ತೀಚೆಗೆ ಸಂಸತ್ತಿನ ಕಲಾಪಗಳು ಕನ್ನಡದಲ್ಲೂ ಸೇರಿದಂತೆ ಸಂವಿಧಾನದ ಮಾನ್ಯತೆ ಪಡೆದ ಎಲ್ಲ ಭಾಷೆಗಳಲ್ಲೂ ಭಾಷಾಂತರವಾಗಬೇಕೆಂಬ ಸಂಸತ್ತಿನ ಒಳಗೆ ಮತ್ತು ಹೊರಗೆ ಕೇಳಿ ಬರುತ್ತಿದ್ದ ಬೇಡಿಕೆಯನ್ನು ಈಡೇರಿಸಿ, ಕಾರ್ಯರೂಪಕ್ಕೆ ತರುವಂತೆ ಮಾಡಲು ಶ್ರಮಿಸಿದ ಸನ್ಮಾನ್ಯ ಸಂಸದೀಯ ಮಂತ್ರಿಗಳಾದ ಶ್ರೀ ಪ್ರಹ್ಲಾದ ಜೋಶಿ ಅವರ ಜೊತೆ ಕನ್ನಡದ ಪರ ನಿಂತ ಕರ್ನಾಟಕದ ಮಾನ್ಯ ಸಂಸದರಲ್ಲಿ ಮಾಜಿ ಪ್ರಧಾನಿಯಾಗಿರುವ ನೀವು ಕೂಡ ಮೊದಲಿಗರಾಗಿದ್ದೀರಿ. ಇದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತಾ ನಿಮಗೆ ದೇವರು ಒಳ್ಳೆಯ ಆರೋಗ್ಯವನ್ನು ಕರುಣಿಸಲೆಂದು ಹೊರನಾಡ ಕನ್ನಡಿಗರ ಮಾತೃ ಸಂಸ್ಥೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ಕನ್ನಡಿಗರ ಪರವಾಗಿ ಪ್ರಾರ್ಥಿಸುತ್ತೇನೆ.

**3 : ಸರ್, ತನ್ನ 75 ವರ್ಷಗಳನ್ನು ಪೂರೈಸುತ್ತಾ, ಅಮೃತ ಮಹೋತ್ಸವದ ಸಂಭ್ರಮವನ್ನು ಆಚರಿಸಿಕೊಳ್ಳುತ್ತಿರುವ ದೆಹಲಿ ಕರ್ನಾಟಕ ಸಂಘದ ಕುರಿತು ತಮ್ಮ ಮನದಾಳದ ಮಾತುಗಳನ್ನು ಹೇಳಬೇಕೆಂದು ಕೋರುತ್ತೇನೆ.**

**ಎಚ್.ಡಿ. ದೇವೇಗೌಡರು :** ದೆಹಲಿ ಕರ್ನಾಟಕ ಸಂಘ 75 ನೇ ವರ್ಷವನ್ನು ಆಚರಣೆ ಮಾಡಿಕೊಳ್ಳುತ್ತಿರುವುದು ನನಗೆ ಅತ್ಯಂತ ಸಂತೋಷದ ವಿಷಯ. ನಾವು ಎಲ್ಲ ಕನ್ನಡಿಗರು ಕೂಡಿ ಮಾಡಬೇಕಾದ ಆಚರಣೆ ಇದು. ನಾನು ಅನೇಕ ಬಾರಿ ಸಂಘಕ್ಕೆ ಬಂದಿದ್ದೇನೆ. ಮಾತನಾಡಿದ್ದೇನೆ. ನಾನು ಹೇಳುವುದೇನೆಂದರೆ

ನಾವೆಲ್ಲರೂ ಕೂಡಿ ಕನ್ನಡದ ಇಂತಹ ಕಾರ್ಯಕ್ರಮಗಳನ್ನು ಮಾಡಬೇಕು. ಎಲ್ಲರಿಗೂ ಶುಭವಾಗಲಿ.

**4 : ಸರ್, ಸಂಸದೀಯ ವ್ಯವಸ್ಥೆಯಲ್ಲಿ ಕನ್ನಡ ಭಾಷೆ ಬಳಕೆ ಮತ್ತು ಬೆಳವಣಿಗೆ ಕುರಿತು ನಿಮ್ಮ ವಿಚಾರಧಾರೆಯನ್ನು ತಿಳಿಸಿ.**

**ಎಚ್.ಡಿ. ದೇವೇಗೌಡರು :** ನಾನು 1962 ರಲ್ಲಿ ಕರ್ನಾಟಕದ ಅಸೆಂಬ್ಲಿಗೆ ಬಂದೆ. ಶಾಸಕನಾಗಿ ನನ್ನ ಇಡೀ ಜೀವನವನ್ನೆಲ್ಲ ಕನ್ನಡದಲ್ಲಿಯೇ ಮಾತನಾಡಿದ್ದೇನೆ. ಅನಂತರ 1972–76 ರವರೆಗೆ ವಿರೋಧ ಪಕ್ಷದ ನಾಯಕನಾದಾಗಲೂ ಸಹ ಕನ್ನಡ ಭಾಷೆಯಲ್ಲಿಯೇ ನಾನು ಮಾತನಾಡಿದ್ದೇನೆ. ಕನ್ನಡ ಭಾಷೆಯನ್ನು ಬಿಟ್ಟು ಬೇರೆ ಭಾಷೆಯಲ್ಲಿ ಮಾತನಾಡಿಲ್ಲ.

ಅನಂತರ 1991 ರಲ್ಲಿ ಸಂಸದನಾಗಿ ದೆಹಲಿಗೆ ಬಂದೆ. ಒಮ್ಮೆ ಬೆಂಗಳೂರಿನ ಚೌಡಯ್ಯ ಮೆಮೊರಿಯಲ್ ಹಾಲ್‌ನಲ್ಲಿ ಲಂಕೇಶ್ ಅವರು ಮತ್ತು ಆ ಕಾಲದ ಹಿರಿಯರು ನನ್ನ ಹತ್ತಿರ ಬಂದು ಈಗಾಗಲೇ ಜೆ.ಎಚ್. ಪಟೇಲ್ ಅವರು ಸಹ ಸಂಸತ್‌ನಲ್ಲಿ ಕನ್ನಡ ಭಾಷೆಯಲ್ಲಿಯೇ ಮಾತನಾಡಿದ್ದಾರೆ. ಆದ್ದರಿಂದ ನೀವು ಸಹ ಕನ್ನಡದಲ್ಲಿಯೇ ಮಾತನಾಡಿ ಒಂದು ಮೆರಗು ತರಬೇಕು. ನಿಮ್ಮ ಭಾಷಣವನ್ನು ನಾವು ಸೇರಿ, ಇಡೀ ರಾಜ್ಯದ ಜನರು ಗಮನಿಸ್ತಾ ಇರ್ತಾರೆ ಅಂತ ಸಲಹೆ ನೀಡಿದ್ದರು. ನಾನು ಮೊದಲನೇ ದಿನ ಸಂಸತ್ತಿನಲ್ಲಿ ಹೋದಾಗ ಕನ್ನಡದಲ್ಲಿ ಮಾತನಾಡಲಿಕ್ಕೆ ಒಂದು ಮನವಿ ಪತ್ರವನ್ನು ಕೊಟ್ಟಿದ್ದೆ. ಆಗ ಲೋಕಸಭೆಯಲ್ಲಿ ಶ್ರೀ ಶಿವರಾಜ್ ಪಾಟೀಲ್ ಅಧ್ಯಕ್ಷರಾಗಿದ್ದರು. ಅವರಿಗೆ ಕನ್ನಡದ ಜೊತೆಗೆ ಬಹಳ ನಂಟಿದೆ. ಅಂದರೆ ಅವರ ಮಗಳನ್ನು ಕನ್ನಡದ ಜಸ್ಟೀಸ್ ಶಿವರಾಜ್ ಪಾಟೀಲ್ ಅವರ ಮಗನಿಗೆ ಕೊಟ್ಟಿದ್ದರಿಂದ ವೈವಾಹಿಕ ಸಂಬಂಧವಿದೆ. ಅವರು ನನ್ನನ್ನು ಕರೆಸಿ, 'ನೀವು ದೆಹಲಿಯಲ್ಲಿ ಕನ್ನಡ ಭಾಷೆಯನ್ನೆ ಮಾತನಾಡಿದರೆ ಎತ್ತರಕ್ಕೆ ಬೆಳೆಯಲು ಆಗುವುದಿಲ್ಲ. ಕನ್ನಡದಲ್ಲಿ ಮಾಡುವ ನಿಮ್ಮ ಭಾಷಣವನ್ನು ಯಾರೂ ಆಸಕ್ತಿಯಿಂದ ಕೇಳಲು ಇಷ್ಟ ಪಡುವುದಿಲ್ಲ. ನೀವು ಇಂಗ್ಲಿಷಿನಲ್ಲಿಯೇ ಮಾತನಾಡಬೇಕು' ಎಂದು ಸಲಹೆ ನೀಡಿದರು. ದೇವರ ಆಶೀರ್ವಾದವೆನೋ ಎಂಬಂತೆ ಕಾವೇರಿ ಇಂಟೆರಿಮ್ ವರದಿ ಬಗ್ಗೆ ನಡೆದ ಚರ್ಚೆಯಲ್ಲಿ ನದಿ ನೀರು ವಿಷಯದಲ್ಲಿ ಮಣಿಶಂಕರ್ ಅಯ್ಯರ್ ಅವರು ಇಂಗ್ಲಿಷಿನಲ್ಲಿಯೇ ಮೊದಲಿಗೆ ಮಾತನಾಡಿದರು.

ಆ ಸಂದರ್ಭದಲ್ಲಿ ನಾನು ನಾಡಿನ ನದಿಗಳ ವಿಷಯದ ಬಗ್ಗೆ ನಾನು ಎಳೆ ಎಳೆಯಾಗಿ ಬಿಡಿಸಿ ಇಂಗ್ಲಿಷ್‌ನಲ್ಲಿಯೇ ಮಾತನಾಡಿದ್ದೆ. ನಾನು ಭಾಷಣ ಮುಗಿಸಿ ಕುಳಿತುಕೊಂಡ ಮೇಲೆ ಮಾಜಿ ಪ್ರಧಾನಿ ಚಂದ್ರಶೇಖರ್ ಅವರು ಸೇರಿದಂತೆ ಅನೇಕರು ನನ್ನ ಹತ್ತಿರ ಬಂದು ಮೈಸೂರಿಗೆ ಇಷ್ಟು ಅನ್ಯಾಯ ಮಾಡಿದ್ದಾರೆಂದು ನಮಗೆ ಗೊತ್ತಿರಲಿಲ್ಲ ದೇವೆಗೌಡರೇ. ಅದಕ್ಕೆ ನಾನು ನಿಮ್ಮ ಹತ್ರ ಬಂದಿದ್ದು. ನಿಮ್ಮ ರಾಜ್ಯಕ್ಕೆ ಈ ತಮಿಳಿನವರು ಇಷ್ಟೊಂದು ದ್ರೋಹ ಮಾಡಿದ್ದಾರೆಯೇ ಎಂದು ಕೇಳಿದರು. ಚಂದ್ರಶೇಖರ್ ಅವರು 'you have stripped the Tamil people, they can't raise voice against your speech' ಎಂದು ಹೇಳಿದರು.

1899 ರ ಆಕ್ಟ್ ಮತ್ತು 1924 ರ ಆಕ್ಟ್ ಎಲ್ಲವುಗಳಲ್ಲಿ ಕರ್ನಾಟಕಕ್ಕೆ ಆದ ಎಲ್ಲ ಅನ್ಯಾಯವನ್ನು ಎಳೆ ಎಳೆಯಾಗಿ ಮಾತನಾಡಿದೆ. ಆವಾಗ ನನಗಿನ್ನು ವಯಸಿತ್ತು, ವಯಸ್ಸಿನ ಜೊತೆಗೆ ಕಾವೇರಿ ಎಂದರೆ ಮನಸ್ಸಿನಲ್ಲಿ ಹೋರಾಟದ ಕೆಚ್ಚು ಇತ್ತು. ಕಾವೇರಿ ವಿವಾದ ಪ್ರಾರಂಭವಾದಾಗಿನಿಂದ ಎಲ್ಲವನ್ನು ಗಮನಿಸಿ ಓದುತ್ತಿದ್ದಾ ನಾನು ಅದನ್ನೆಲ್ಲ ಸಂಸತ್ತಿನ ಪ್ರೊಸೀಡಿಂಗ್ಸ್‌ನಲ್ಲಿ ವಿವರವಾಗಿ ಹೇಳಿದ್ದೆ.

**5 : ಸರ್ ನೀವು ದೆಹಲಿಗೆ ಪ್ರಧಾನಿಯಾಗಿ ಬಂದಾಗ ನಿಮ್ಮ ಮತ್ತು ದೆಹಲಿಯಲ್ಲಿನ ಆಡಳಿತದ ಅನುಭವದ ಕುರಿತು ಹೇಳಿ / ಏನಾದ್ರು ಹೇಳಬಹುದಾ ಸರ್?**

**ಎಚ್.ಡಿ. ದೇವೇಗೌಡರು :** ನಾನು ಪ್ರಧಾನಿಯಾಗಿ ಬಂದ ಮೇಲೆ ಆ ವಿಷಯ ಇಲ್ಲಿ ಎಲ್ಲಿಯವರೆಗೂ ಹೋಯಿತು ಎಂದರೆ ದೆಹಲಿಯಲ್ಲಿ ಹೋಟೆಲ್‌ಗಳಲ್ಲಿ ರಾಗಿಮುದ್ದೆ ಮಾಡಲಿಕ್ಕೆ ಪ್ರಾರಂಭ ಮಾಡಿದರು. ನಾನು ದೆಹಲಿಗೆ ಬಂದ ಬಳಿಕ ಕನ್ನಡದ ರಾಗಿಮುದ್ದೆ ಖ್ಯಾತಿ ದೆಹಲಿಗೆ ಪರಿಚಯ ಆಯಿತು. ಅದಾದ ಮೇಲೆ ಇತರೆ ನಾಲ್ಕಾರು ರಾಗಿಮುದ್ದೆ ಹೋಟೆಲುಗಳು ದೆಹಲಿಯಲ್ಲಿ ಪ್ರಾರಂಭವಾದವು.

**6 : ಈಗ ಕರ್ನಾಟಕದ ವಿಷಯವನ್ನು ತೆಗೆದುಕೊಂಡರೆ ಸದ್ಯ ತಾವು 'ಹಿರಿಯರ ಸದನ' ದಲ್ಲಿರುವುದರಿಂದ ತಮ್ಮ ಉಪಸ್ಥಿತಿಯೇ ರಾಜ್ಯಸಭೆಯಲ್ಲಿ ಕನ್ನಡದ ಶಕ್ತಿಯನ್ನು ಹೆಚ್ಚಿಸಿದೆ. ಈ ಬಗ್ಗೆ ಏನನ್ನು ಹೇಳಲಿಕ್ಕೆ ಇಷ್ಟ ಪಡ್ತೀರಾ ಸರ್?**

**ಎಚ್.ಡಿ. ದೇವೇಗೌಡರು :** ಈಗ ಕರ್ನಾಟಕಕ್ಕೆ ಸಂಬಂಧಪಟ್ಟದ್ದು ಏನಾದ್ರೂ ವಿಷಯ ಇದ್ದರೆ ಮಾತಾಡ್ತೀನಿ. ಮೊನ್ನೆ ಸಂವಿಧಾನ ತಿದ್ದುಪಡಿ ವಿಷಯದಲ್ಲಿ ಕರ್ನಾಟಕದಲ್ಲಿ ಕಾಡು ಕುರುಬ, ಬೆಟ್ಟ ಕುರುಬ ಜಾತಿಯವರಿಗೆ ನೀಡಲಾದ ಮೀಸಲಾತಿ ಕುರಿತಾದ ವಿಷಯ ಬಂತು. ಹಾಗಾಗಿ ನಾನು ಅಂತಹ ವಿಷಯಗಳ ಬಗ್ಗೆ ಮಾತನಾಡಿದೆ. ನಮ್ಮಲ್ಲಿ ಶೇಕಡಾ ಎಂಬತ್ತರಷ್ಟು ಮೀರಿದ ಬಡತನವಿದೆಯೆಂದು ವರದಿಗಳು ಮತ್ತು ಮಾಧ್ಯಮಗಳೂ ಹೇಳುತ್ತಿವೆ. ಅದಕ್ಕಾಗಿ ನಾನು ಹತ್ತೂವರೆ ತಿಂಗಳು ಪ್ರಧಾನಮಂತ್ರಿಯಾಗಿದ್ದಾಗ ಏನು ಕೆಲಸ ಮಾಡಿದ್ದೇನೆ. ಅದರ ಬಗ್ಗೆ ಮಾತನಾಡುತ್ತೇನೆ.

**7 : ತಾವು ವಿಧಾನ ಸಭೆಯಲ್ಲಿ ಮತ್ತು ಸಂಸತ್ತಿನಲ್ಲಿನ ಅಧಿವೇಶನಗಳಲ್ಲಿ ಹೆಚ್ಚು ಹೊತ್ತು ಕುಳಿತು ಬಹಳ ತಾಳ್ಮೆಯಿಂದ ಎಲ್ಲ ಸದಸ್ಯರ ಭಾಷಣಗಳನ್ನು ಆಲಿಸಿ, ನಿಮ್ಮ ಸರದಿ ಬಂದಾಗ ಬಹಳ ತಾರ್ಕಿಕವಾಗಿ ವಿಷಯ ಮಂಡನೆ ಮಾಡುತ್ತೀರಿ ಎಂಬುದು ನಿಮ್ಮನ್ನು ಹತ್ತಿರದಿಂದ ಬಲ್ಲ ಅನೇಕರು ನಿಮ್ಮ ಬಗ್ಗೆ ನನ್ನ ಜೊತೆ ಹೇಳಿರುವ ಮಾತು. ಅಂತಹ ಒಂದು ಖ್ಯಾತಿ ತಮ್ಮದು. ಹಾಗಾಗಿ ಇವತ್ತಿನ ಸಂಸದರಿಗೆ ತಾವು ಏನಾದರೂ ಹೇಳಲು ಇಷ್ಟಪಡ್ತೀರಾ ಸರ್?**

**ಎಚ್.ಡಿ. ದೇವೇಗೌಡರು :** ಹಿಂದೆ ಕುಳಿತು ಮಾತಾಡಿದ್ದೇನೆ. ಈಗ ನನಗೆ ತೊಂಭತ್ತು ವಯಸ್ಸು. ನಿಂತು ಮಾತನಾಡಲು ಕಷ್ಟವಾಗೋದರಿಂದ ಕುಳಿತುಕೊಂಡು ಮಾತನಾಡಲು ನನಗೆ ಸಂಸತ್ತಿನಲ್ಲಿ ಅವಕಾಶ ಕಲ್ಪಿಸಿದ್ದಾರೆ. ನನಗೆ ಬಹಳ ಹೊತ್ತು ಕುಳಿತುಕೊಳ್ಳಲು ಆರೋಗ್ಯ ದೃಷ್ಟಿಯಿಂದ ಈಗ ಕಷ್ಟವಾಗುತ್ತಿದೆ. ಇದು ನಮ್ಮ ಉಪರಾಷ್ಟ್ರಪತಿಗಳು (ರಾಜ್ಯಸಭೆ ಚೇರ್‌ಮನ್‌ರಿಗೆ) ತಿಳಿದಿರುವ ವಿಚಾರವಾಗಿರುವುದರಿಂದ ಸದನದಲ್ಲಿ ನನಗೆ ಬಹಳ ಹೊತ್ತು ಕಾಯಬೇಡಿ. ಏನಾದರು ಮಾತನಾಡುವ ವಿಚಾರವಿದ್ದರೆ ನಾನು ಅವಕಾಶ ಕೊಡುತ್ತೇನೆ, ತಿಳಿಸಿ ಅಂತ ಹೇಳಿದ್ದಾರೆ. ಹಾಗಾಗಿ ನನಗೆ ಅದೊಂದು ಗೌರವ. ಇನ್ನು ಈಗ ಹೊಸ ಜನರೇಷನ್‌ನ ಸಂಸದರು ಸದನದಲ್ಲಿ ಹೆಚ್ಚು ಭಾಗವಹಿಸಬೇಕು, ಬೇರೆಯವರು ಹೇಳುವ ವಿಷಯವನ್ನು ಕೂಡ ಅರ್ಥಮಾಡಿಕೊಂಡು ತಿಳಿದುಕೊಳ್ಳಬೇಕಾಗುತ್ತೆ. ಪ್ರಜಾಪ್ರಭುತ್ವದಲ್ಲಿ ಎಲ್ಲರ ಅಭಿಪ್ರಾಯಗಳನ್ನು. ತಮಗಾಗಿರುವ ಅನ್ಯಾಯ, ನೋವುಗಳನ್ನು ಹೇಳಲಿಕ್ಕೆ ಜನಪ್ರತಿನಿಧಿಗಳಿಗೆ ಅಧಿವೇಶನ ಒಂದು ಒಳ್ಳೆಯ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಸದನದಲ್ಲಿ ವಿಷಯದ ಚರ್ಚೆ ಮಾಡುವಾಗ ಬೇರೆ ಬೇರೆ ದೃಷ್ಟಿಕೋನಗಳಲ್ಲಿ ಅರ್ಥಮಾಡಿಕೊಳ್ಳಬಹುದು. ಸರ್ಕಾರದ ಗಮನ ಸೆಳೆಯಬಹುದು. ಉತ್ತರ ಕೊಡಿ ಅಂತ ಮಂತ್ರಿಗಳನ್ನು ಕೇಳಬಹುದು. ಹಾಗಾಗಿ ಎಲ್ಲರೂ ಅಧಿವೇಶನಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.

**8 : ತಾವು ದೇಶದ ಪ್ರಧಾನಮಂತ್ರಿಗಳಾಗಿದ್ದಾಗ ಮಾಡಿದ ಅನೇಕ ಕೆಲಸಗಳಲ್ಲಿ ತಮಗೆ ಅತಿ ಹೆಚ್ಚು ಆತ್ಮತೃಪ್ತಿ ಕೊಟ್ಟಂತಹ ಕೆಲಸಗಳು ಅದರಲ್ಲಿಯೂ ಕರ್ನಾಟಕಕ್ಕೇ ಸಂಬಂಧಿಸಿದಂತೆ ಹೇಳಿಕೊಳ್ಳಬಹುದಾದ ಯೋಜನೆ ಅಥವಾ ಕಾರ್ಯಕ್ರಮಗಳ ಬಗ್ಗೆ ತಿಳಿಸಿ ಸರ್.**

**ಎಚ್.ಡಿ. ದೇವೇಗೌಡರು :** ಅನೇಕ ಕೆಲಸಗಳನ್ನು ಮಾಡಿದ್ದೇನೆ. ಅನುದಾನ ನೀಡಿದ್ದೇನೆ. ಬಡವರಿಗೆ ಮೂಲಭೂತ ಸೌಕರ್ಯ ಒದಗಿಸಲಿಕ್ಕೆ ಸಾಲದ ರೂಪದಲ್ಲಿ ಹಣ ನೀಡದೆ ನೆರವು–ನಿಧಿಯ ರೂಪದಲ್ಲಿ 1997–98 ರ ಸಾಲಿನಲ್ಲಿ 100 ಕೋಟಿ ರೂ.ಗಳನ್ನೂ ಬಿಡುಗಡೆ ಮಾಡಲಾಗಿತ್ತು. ಹುಡ್ಕೋ ಸಂಸ್ಥೆಯಿಂದ 36248 ಮನೆಗಳನ್ನು ಮಂಜೂರು ಮಾಡಲಾಗಿತ್ತು. ಇದಕ್ಕಾಗಿ ಕೇಂದ್ರದ 293 ಕೋಟಿ ರೂ ಒದಗಿಸಲಾಗಿತ್ತು. ನೀರಾವರಿ ಅಭಿವೃದ್ಧಿಗಾಗಿ 122 ಕೋಟಿ ರೂ.ಗಳನ್ನೂ ನೀಡಲಾಗಿತ್ತು. 'ಕೃಷ್ಣ ಜಲಭಾಗ್ಯ ನಿಗಮಕ್ಕೆ 252 ಕೋಟಿ ರೂ.ಗಳ ನೆರವು ನೀಡಲು ಒಪ್ಪಿಗೆ ಕೊಡಲಾಯಿತು' ತ್ವರಿತ ನೀರಾವರಿ ಪ್ರಯೋಜನ ಕಾರ್ಯಕ್ರಮ (AIBP) ಕ್ಕೆ 130 ಕೋಟಿ ರೂ.ಗಳನ್ನೂ ನೀಡಲಾಯಿತು. ವಿದ್ಯುಚ್ಛಕ್ತಿ ಉತ್ಪಾದಿಸಲು ಕೊಜೆಂಟ್ರಿಕ್ಸ್ ಸಂಸ್ಥೆಯ ಯೋಜನೆಗಳಿಗೆ ನೆರವಾಗಲು ಒಟ್ಟು 574 ಕೋಟಿ ರೂ.ಗಳನ್ನು ನೀಡಲಾಯಿತು. ಗ್ರಾಮೀಣ ಮೂಲಭೂತ ಸೌಕರ್ಯ ವಿಶೇಷವಾಗಿ ಕುಡಿಯುವ ನೀರು, ಸಾರ್ವಜನಿಕ ಶೌಚಾಲಯಗಳು, ರಸ್ತೆಗಳು ಇತ್ಯಾದಿಗಳನ್ನು ಒದಗಿಸಲು ಒಟ್ಟು 634 ಕೋಟಿ ರೂ.ಗಳನ್ನೂ ಒದಗಿಸಲಾಯಿತು.

ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ನಾನೇ ಮುಖ್ಯಮಂತ್ರಿಯಾಗಿದ್ದಾಗ ಆರಂಭಿಸಿದ್ದು ಅದಕ್ಕೆ ರಾಜ್ಯ ಸರ್ಕಾರ ಕೊಡುತ್ತಿದ್ದ ವಾರ್ಷಿಕ 270 ಕೋಟಿ ಹಣವನ್ನು ಕೇಂದ್ರದಿಂದ ಬಿಡುಗಡೆ ಮಾಡಲಾಯಿತು. ಇದಕ್ಕಾಗಿ ಒಟ್ಟಾರೆ 1600 ಕೋಟಿ ರೂ.ಗಳನ್ನೂ ಬಿಡುಗಡೆ ಮಾಡಲಾಯಿತು.

ಇನ್ನು ರೈಲು ಮಾರ್ಗಗಳ ವಿಸ್ತರಣೆ ಮತ್ತು ಹೊಸ ಮಾರ್ಗಗಳ ರಚನೆ ವಿಚಾರದಲ್ಲೂ ಕರ್ನಾಟಕಕ್ಕೇ ಒಟ್ಟು 1220 ಕೋಟಿ ರೂಗಳಷ್ಟು ಅಂದಾಜು ವೆಚ್ಚದ ಅನೇಕ ಹೊಸ ಮಾರ್ಗಗಳನ್ನು ಘೋಷಿಸಲಾಯಿತು. ಅನೇಕ ಯೋಜನೆಗಳನ್ನು ತಂದಿದ್ದೇನೆ. ಇದಲ್ಲದೆ, ನಾನು ಮಾಡಿರುವ ಬೇರೆ ಬೇರೆ ಕೆಲಸಗಳ ಬಗ್ಗೆ ಸುಗಾತಾ ಶ್ರೀನಿವಾಸ್ ರಾಜು ಅವರು–'Furrows in a field' ಎಂಬ ಒಂದು ಪುಸ್ತಕ ಕೂಡ ಬರೆದಿದ್ದಾರೆ. ಆ ಪುಸ್ತಕದಲ್ಲಿ ನಮ್ಮ ನಾಡಿಗೆ ಏನು ಅನ್ಯಾಯವಾಗಿದೆ ಮತ್ತು ಈಗ ನಡೆಯುತ್ತಿರುವ ರಷ್ಯಾ / ಯುಕ್ರೇನ್ ದೇಶಗಳ ನಡುವೆ ಯುದ್ಧದ ಬಗ್ಗೆ ಇವತ್ತು ಅಮೆರಿಕಾದಲ್ಲಿ ನಡೆಯುತ್ತಿರುವ ವಿದ್ಯಮಾನಗಳು, ಇಂಗ್ಲೆಂಡಿನಲ್ಲಿ ಆಗುತ್ತಿರೋದು, ಬಾಂಗ್ಲಾ ದೇಶದ ಶೇಖ್ ಹಸೀನಾ ಅವರ ಜೊತೆಗಿನ ಜಂಟಿ ಸಭೆ ಒಪ್ಪಂದ ಮಾಡಿ, ನಾನು ಆಗ ತೆಗೆದುಕೊಂಡ ನಿರ್ಣಯ.

**9 : ಎಲ್ಲ ರಾಜಕೀಯ ವಿಷಯಗಳ ಹೊರತಾಗಿ ಸಮಸ್ತ ಕನ್ನಡಿಗರು ಇವತ್ತು ನಿಮ್ಮನ್ನು ಕುರಿತು ಹೆಮ್ಮೆಯಿಂದ ಭಾರತ ದೇಶದ ಪ್ರಧಾನಮಂತ್ರಿ ಸ್ಥಾನಕ್ಕೇರಿದ ಧೀಮಂತ ನಾಯಕ ಎಂಬ ಗೌರವವನ್ನು ಹೊಂದಿದ್ದಾರೆ. ಈ ಬಗ್ಗೆ ನಿಮ್ಮ ಅನಿಸಿಕೆ?**

**ಎಚ್.ಡಿ. ದೇವೇಗೌಡರು :** ನೋಡಿ ನಿಮಗೆ ಒಂದು ವಿಷಯ ಹೇಳುತ್ತೇನೆ. ಇನ್ನು ಮೂರು ತಿಂಗಳಾದರೆ ನನಗೆ ತೊಂಭತ್ತು ವರ್ಷ ವಯಸ್ಸು ಮುಗಿಯುತ್ತವೆ. ಯಾರು ಎಷ್ಟು ಹೆಮ್ಮೆ ಪಡುತ್ತಾರೋ, ಯಾರು ಎಷ್ಟು ಅಸೂಯೆ ಪಡುತ್ತಾರೋ, ನಾನು ಯಾವುದಕ್ಕೂ ಗಮನ ಕೊಡೋದಕ್ಕೆ ಹೋಗಬಾರದು ಅಂತ ತೀರ್ಮಾನ ಮಾಡಿದ್ದೇನೆ. ಕರ್ನಾಟಕದಲ್ಲಿ ಒಬ್ಬೊಬ್ಬರಿಗೆ ಒಂದೊಂದು ಅಭಿಪ್ರಾಯವಿದೆ. ಆ ಬಗ್ಗೆ ನಾನು ಏನನ್ನೂ ಹೇಳಲಿಕ್ಕೆ ಹೋಗೋದಿಲ್ಲ.

**10 : ಇಷ್ಟು ಹೊತ್ತು ನಮ್ಮ ಜೊತೆ ಮಾತನಾಡಿ ಅನೇಕ ಉತ್ತಮ ವಿಚಾರಗಳನ್ನು ಹಂಚಿಕೊಂಡಿದ್ದಕ್ಕೆ ನಿಮಗೆ ಮತ್ತೊಮ್ಮೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ನಮ್ಮ ಸಂಘದ ಅಮೃತ ಮಹೋತ್ಸವ ಸಮಾರಂಭಕ್ಕೆ ತಾವು ದಯಮಾಡಿ ಬಂದು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ನಮ್ಮ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ ಮತ್ತು ಕಾರ್ಯಕಾರಿ ಸಮಿತಿಯ ಪರವಾಗಿ ನಿಮ್ಮನ್ನು ವಿನಂತಿಸಿಕೊಳ್ಳುತ್ತೇವೆ ಸರ್.**

**ಎಚ್.ಡಿ. ದೇವೇಗೌಡರು :** ಎಲ್ಲರೂ ಸಂಘವನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದೀರಿ. ಒಳ್ಳೆಯ ಕಾರ್ಯಕ್ರಮಗಳನ್ನು ಮಾಡುತ್ತಿದ್ದೀರಿ. ಈ ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ನಾನೂ ಕೂಡ ಮನವಿ ಪತ್ರ ಕೊಟ್ಟಿದ್ದೀನಿ. ಕಾರ್ಯಕ್ರಮವನ್ನು ಚೆನ್ನಾಗಿ ಮಾಡಿ, ಒಳ್ಳೆಯದಾಗಲಿ.

**ಟಿಪ್ಪಣಿ:** ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ವರ್ಷದಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ಕನ್ನಡಕ್ಕೆ ಕರ್ನಾಟಕಕ್ಕೇ ಗೌರವ ತಂದು ಕೊಟ್ಟ ಸನ್ಮಾನ್ಯ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಜೊತೆ ಸಂದರ್ಶನ ಮಾಡಲು ನಾನು ದೆಹಲಿಗೆ ಬಂದಾಗಿನಿಂದಲೂ ಸ್ನೇಹಿತರಾಗಿರುವ, ದೇವೇಗೌಡರ ಆಪ್ತ ಕಾರ್ಯದರ್ಶಿಯಾಗಿ 30 ವರ್ಷಗಳಿಂದಲೂ ಅವರ ಎಲ್ಲರೊಂದಿಗಿನ ಸ್ನೇಹಜೀವಿ, ಆತ್ಮೀಯ **ಶ್ರೀ ಬಿ.ಆರ್. ಚಂದ್ರಶೇಖರ್** ಅವರನ್ನ ಕೇಳಿದಾಗ ಅವರು ದಿನಾಂಕ 24 ನೇ ಡಿಸೆಂಬರ್ 2022 ರಂದು ರಾತ್ರಿ 7.30 ಕ್ಕೆ ದೆಹಲಿಯ ಸಫ್ದರ್‌ಜಂಗ್‌ನಲ್ಲಿರುವ ಮಾಜಿ ಪ್ರಧಾನಿ ಅವರ ಅಧಿಕೃತ ನಿವಾಸದಲ್ಲಿ ಅವರನ್ನು ಭೇಟಿ ಮಾಡಲು ವ್ಯವಸ್ಥೆ ಮಾಡಿಕೊಟ್ಟು ಸಂದರ್ಶನಕ್ಕೆ ನೆರವಾಗಿದ್ದಾರೆ. ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು.

## ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ

**10ನೇ ಮತ್ತು 12ನೇ ತರಗತಿಗಳ ಸಿ.ಬಿ.ಎಸ್.ಇ ಪರೀಕ್ಷಾ ಫಲಿತಾಂಶ**

2022–23ನೇ ಶೈಕ್ಷಣಿಕ ಸಾಲಿನ 10ನೇ ಹಾಗೂ 12ನೇ ತರಗತಿಯ ಸಿ.ಬಿ.ಎಸ್.ಇ ಪರೀಕ್ಷಾ ಫಲಿತಾಂಶ ಇತ್ತೀಚೆಗೆ ಪ್ರಕಟವಾಗಿದ್ದು ನವದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆಗೈದಿದ್ದಾರೆ.

10ನೇ ತರಗತಿಯು ಶೇ.94.12 ದಾಖಲಿಸಿದ್ದು, ಆಯುಷ್ ಗುಪ್ತ (ಶೇ 88.60) ಅತ್ಯಧಿಕ ಅಂಕವನ್ನು ಗಳಿಸಿರುತ್ತಾರೆ. 12ನೇ ತರಗತಿಯು ಶೇ. 98.06 ದಾಖಲಿಸಿದ್ದು, ವಿಜ್ಞಾನ ವಿಭಾಗದಲ್ಲಿ ಗೌರವ್ ಸಿಂಗ್ (ಶೇ. 88), ವಾಣಿಜ್ಯ ವಿಭಾಗದಲ್ಲಿ ಕೃತಿಕಾ (ಶೇ. 89.40) ಹಾಗೂ ಕಲಾ ವಿಭಾಗದಲ್ಲಿ ತುಷಾರ್ ಅಂತಾಲ್ (ಶೇ. 86.40) ಅತ್ಯಧಿಕ ಅಂಕವನ್ನು ಗಳಿಸಿರುತ್ತಾರೆ .

***ಅರವಿಂದ ಬಿಜ್ಜೆ***

## ದೆಹಲಿ ಸ್ನೇಹ ಕನ್ನಡ ಲೇಡೀಸ್ ಅಸೋಸಿಯೇಷನ್

**2023–2025ರ ಅವಧಿಗೆ ನೂತನ ಕಾರ್ಯಕಾರಿ ಸಮಿತಿ ಆಯ್ಕೆ**



ಶ್ರೀಮತಿ ಸರೋಜ ಮಾಧವ
ಅಧ್ಯಕ್ಷರು



ಶ್ರೀಮತಿ ಶೋಭಾ ಗೌಡ
ಕಾರ್ಯದರ್ಶಿ


ದಿನಾಂಕ 17 ಮೇ 2023ರಂದು ದೆಹಲಿ ಕರ್ನಾಟಕ ಸಂಘದ ವಾಚನಾಲಯದಲ್ಲಿ ಸ್ನೇಹ ಲೇಡೀಸ್ ಅಸೋಸಿಯೇಷನ್ ನ ಮೇ ತಿಂಗಳ ಸಭೆ ನಡೆಸಲಾಗಿತ್ತು. ಈ ಸಭೆಯಲ್ಲಿ ಮುಂಬರುವ ಅವಧಿಗೆ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಶ್ರೀಮತಿ ಸರೋಜ ಮಾಧವ ಅವರು ಮುಂದುವರಿದಿದ್ದಾರೆ.

ಶ್ರೀಮತಿ ಮೀನಾಕ್ಷಿ ಅವರು ಉಪಾಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಶ್ರೀಮತಿ ಶೋಭಾ ಗೌಡ, ಜಂಟಿ ಕಾರ್ಯದರ್ಶಿಯಾಗಿ ಶ್ರೀಮತಿ ವಿಮಲಾ ರಂಗನಾಥ ಮತ್ತು ಖಜಾಂಚಿಗಳಾಗಿ ಶ್ರೀಮತಿ ಅಶ್ವಿನಿ ಬಿ.ಎಸ್ ಆಯ್ಕೆಯಾದರೆ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಶ್ರೀಮತಿ ಲಕ್ಷ್ಮಿ ಕಿಣಿ, ಶ್ರೀಮತಿ ರತ್ನ, ಶ್ರೀಮತಿ ಉಷಾ, ಶ್ರೀಮತಿ ರೀನಾ ಮತ್ತು ಶ್ರೀಮತಿ ಪ್ರತಿಭಾ ಗೌಡ ಆಯ್ಕೆಯಾದರು.

***ಅಶ್ವಿನಿ ಬಿ.ಎಸ್***

# ನೆನಪು ಮಾತ್ರವಾದ ದೆಹಲಿಯ ಹಿರಿಯ ಕನ್ನಡತಿ ನೇತ್ರಾವತಿ ಮಯ್ಯ



'ಎಲ್ಲಾದರು ಇರು ನೀ ಕನ್ನಡವಾಗಿರು' ಅನ್ನುವ ಕವಿವಾಣಿಯಂತೆ ಹೊರನಾಡಿನಲ್ಲಿ ವಾಸಿಸುವ ನಮಗೆ ಕನ್ನಡವೇ ಉಸಿರು. ನಾಲಕು ಜನ ಸೇರಿದರೆ ಕನ್ನಡದ ಹಬ್ಬವೇ. ಹೊಟ್ಟೆಪಾಡಿಗಾಗಿ ದೆಹಲಿಗೆ ಬಂದು ಇಲ್ಲಿಯೇ ನೆಲೆಸಿಹೋದವರಿದ್ದಾರಿಲ್ಲಿ.

ಹಾಗೆ ನೆಲೆಸಿದವರಲ್ಲಿ ನೇತ್ರಾವತಿ ಮಯ್ಯ ಒಬ್ಬರು. ನೇತ್ರಾವತಿ ಮಯ್ಯ ಅವರು ಈಗ ಕಾಸರಗೋಡಿಗೆ ಸೇರಿಹೋದ ಮಂಗಲಪಾಡಿಯ ಮಾನಿಹಿತ್ಲು ಎಂಬಲ್ಲಿ 1933ರಲ್ಲಿ ಜನಿಸಿದರು. ಮಂಗಲಪಾಡಿಯ ಪ್ರಾಥಮಿಕ ಶಾಲೆಯಲ್ಲೇ ಓದಿದ ನೇತ್ರವತಿ ಮುಂದೆ ಕುಂಬಳೆಯಲ್ಲಿ ಬೋರ್ಡ್ ಹೈಸ್ಕೂಲಿನಲ್ಲಿ ಎಂಟನೆ ಕ್ಲಾಸಿನವರೆಗೂ ಓದಿದರಂತೆ.

ಹೆಣ್ಣುಮಕ್ಕಳು ಓದುವುದೇ ಒಂದು ದೊಡ್ಡ ಪಾಪವೆಂದುಕೊಳ್ಳುವ ಕಾಲದಲ್ಲಿಯೂ ಕೆಲ ತಂದೆ–ತಾಯಿಯರು ತಮ್ಮ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿದರೂ, ಶಾಲೆಗೆ ಹೋಗಿದ್ದಾಯಿತು ಇನ್ನು ಪರೀಕ್ಷೆ ಯಾಕೆ? ಎನ್ನುವ ಪುರುಷ ದಬ್ಬಾಳಿಕೆಯ ಸಮಾಜದಲ್ಲಿ ಶಾಲೆಗೆ ಹೋದರೂ ಪರೀಕ್ಷೆ ಕಟ್ಟಬಾರದು ಎನ್ನುವ ಕಟ್ಟುಪಾಡುಗಳಿದ್ದು ಯಾವ ಹೆಣ್ಣುಮಕ್ಕಳೂ ಪರೀಕ್ಷೆಗೆ ಕೂಡುತ್ತಿರಲೇ ಇಲ್ಲವಂತೆ. ಹೀಗೆ ನೇತ್ರಾವತಿಯ ವಿದ್ಯಾಭ್ಯಾಸವೂ ಅಲ್ಲಿಗೆ ಕೊನೆಗೊಂಡಿತು.

ಅವರ ಶಾಲಾ ದಿನಗಳಲ್ಲಿ ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ, ಕನ್ನಡದ ಮೊದಲ 'ರಾಷ್ಟ್ರಕವಿ' ಶ್ರೀ ಮಂಜೇಶ್ವರ ಗೋವಿಂದ ಪೈ ಆಗಾಗ ನೇತ್ರಾವತಿ ಅವರ ಮಂಗಲಪಾಡಿಯ ಶಾಲೆಗೆ ಬರುತ್ತಿದ್ದರಂತೆ. ಹಾಗೆ ಬಂದಾಗೆಲ್ಲ ರಾಷ್ಟ್ರಪ್ರೇಮವನ್ನು ಮಕ್ಕಳಲ್ಲಿ ಬಿತ್ತುವಂತ ಕವಿತೆಗಳನ್ನು ಮಕ್ಕಳಿಂದಲೇ ಓದಿಸಿ, ಹಾಡಿಸುತ್ತಿದ್ದರೆಂದು ನೇತ್ರಾವತಿ ಅಮ್ಮ ಆಪ್ಯಾಯತೆಯಿಂದ ನೆನೆಯುತ್ತಾರೆ. ತುಳು–ಕೊಂಕಣಿ–ಮಲೆಯಾಳ ಭಾಷಾ ಸಮುದಾಯಗಳ ಮಧ್ಯೆ ಹುಟ್ಟಿ ಬೆಳೆದರೂ, ಕನ್ನಡ ಅಭಿಮಾನವನ್ನು ತಮ್ಮ ಸಾಹಿತ್ಯಿಕ–ಸಾಂಸ್ಕೃತಿಕ ಸಂಶೋಧನೆಗಳ ಮೂಲಕ ಮೆರೆದ ಕವಿ ಗೋವಿಂಪ ಪೈ ಅವರಂಥ ಮಹಾನ್ ಚೇತನರ ಮಧ್ಯೆ ನೇತ್ರಾವತಿ ಅವರ ಬಾಲ್ಯ ಕಳೆದುದು ಅಂಥವರಿಂದ ಪ್ರಭಾವಿತರಾದುದು ಈ ಜನ್ಮದ ಪುಣ್ಯವೆನ್ನಬೇಕು.

ಗೋವಿಂದ ಪೈ ಅವರು ನೇತ್ರಾವತಿ ಅವರ ತಂದೆಯ ಗೆಳೆಯರಾಗಿದ್ದರಂತೆ. ಸ್ವಾತಂತ್ರ್ಯಪೂರ್ವದ ಚಳುವಳಿಗಳಲ್ಲಿ ಇವರ ಮನೆತನದ ಹಿರಿಯರೂ ಸಕ್ರಿಯರಾಗಿ ಭಾಗವಹಿಸಿದ್ದರಂತೆ. ತಂದೆ ಶಂಕಣ್ಣಯ್ಯ ಊರಿನ ಶ್ಯಾನುಭೋಗರಾಗಿದ್ದರಂತೆ. ಹಿಂದೆ ಇವರ ಪೂರ್ವಜರು ರಾಣಿ ಅಬ್ಬಕ್ಕನ ಆಸ್ಥಾನದಲ್ಲಿ ಪೂಜೆ ಮಾಡುತ್ತಿದ್ದರಂತೆ. ಬ್ರಿಟಿಷರೊಡನೆ ಯುದ್ಧದಲ್ಲಿ ಅಸಂಖ್ಯಾತ ಆಸ್ಥಾನಿಗರು ಜೀವವುಳಿಸಿಕೊಂಡು ದಕ್ಷಿಣಕ್ಕೆ ವಲಸೆ ಹೋದರಂತೆ. ಹೀಗೆ ಮಂಗಲಪಾಡಿಗೆ (ಈಗಿನ ಕೇರಳಕ್ಕೆ ಸೇರಿಹೋದ) ಬಂದು ನೆಲೆಸಿದ ಕುಟುಂಬವಿದು. ಮುಂದೆ ಮಹಾತ್ಮಾ ಗಾಂಧೀಜಿಯವರ ನಿಕಟವರ್ತಿಯಾಗಿದ್ದ ಆಚಾರ್ಯ ವಿನೋಭಾ ಭಾವೆ ಅವರು ಭೂದಾನ ಚಳುವಳಿಯನ್ನು ಆರಂಭಿಸಿದ್ದಾಗ ತಮ್ಮ ಭಾಗದ ಹತ್ತು ಹನ್ನೆರಡೆಕರೆಯ ಜಮೀನನ್ನು ನೇತ್ರಾವತಿ ತಂದೆ ಶಂಕಣ್ಣಯ್ಯ ಆಚಾರ್ಯರಿಗೆ ಬಿಟ್ಟುಕೊಟ್ಟಿದ್ದರಂತೆ. ಅದೇ ಭೂಮಿಯನ್ನು ಅವರ ಮನೆಯಲ್ಲೇ ಕೆಲಸ ಮಾಡಿಕೊಂಡಿದ್ದ ಆಳು 'ಪುತ್ತೂರ' ನಿಗೆ ದಾನವಾಗಿ ಕೊಡಿಸಲಾಯಿತಂತೆ. ಈಗಲೂ ಅದೇ ಜಮೀನಿನಲ್ಲಿ ಅವನ ಕುಟುಂಬ ಬಾಳಿ ಬೆಳಗುತ್ತಿದೆಯೆಂಬುದನ್ನು ನೇತ್ರಾವತಿ ನೆನೆಯುತ್ತಾರೆ.

ವಿನೋಭಾ ಭಾವೆ ಅವರು ದೇಶದಾದ್ಯಂತ ಪಾದಚಾರಿಯಾಗೇ ನಡೆಯುತ್ತಾ 'ಭೂದಾನ ಚಳವಳಿ'ಯ ಮೂಲಕ ಲಕ್ಷಾಂತರ ಎಕರೆ ಜಮೀನನ್ನು ಬಡವರಿಗೆ ದಾನವಾಗಿ ಕೊಡಿಸಿದರು. ತಮಗಾಗಿ ಏನನ್ನೂ ಬಯಸಲಿಲ್ಲ. ದೇಶಕ್ಕಾಗಿ, ಧರ್ಮಕ್ಕಾಗಿ ದುಡಿಯುವ ಕಾರ್ಯಕ್ಷಮತೆಯ ವಿನೋಭಾ ಭಾವೆ, ಗೋವಿಂದ ಪೈ, ಕೈಯಾರ್ ಕಿಂಯಿಣ್ಣ ರೈ ಮುಂತಾದ ದೇಶಭಕ್ತರ ಗಾಢ ಪ್ರಭಾವವನ್ನು ನಾವು ನೇತ್ರಾವತಿ ಮಯ್ಯ ಅವರ ಸಮಗ್ರ ವ್ಯಕ್ತಿತ್ವದಲ್ಲಿ, ಬದುಕಿದ ರೀತಿಯಲ್ಲಿ, ಜೀವಪರ ಕಾಳಜಿ, ಅಂತಃಕರಣದಲ್ಲಿ ಕಾಣುತ್ತೇವೆ.

ಭಾರತ ಸರ್ಕಾರದ ನೌಕರಿಯಲ್ಲಿರುವ ಶೇಷಪ್ಪಯ್ಯನವರೊಂದಿಗೆ ನೇತ್ರಾವತಿ ಮದುವೆಯಾದರು. ಮದ್ರಾಸಿನ ಸಿಬಿಐ ನಲ್ಲಿದ್ದ ಶೇಷಪ್ಪಯ್ಯ ಅವರನ್ನು ಬೆಂಗಳೂರಿನಲ್ಲಿ ತಮ್ಮ ಸಿಬಿಐ ಶಾಖೆಯನ್ನು ತೆರೆಯುವ ಕಾರಣದಿಂದ ಸ್ಥಳಾಂತರಿಸಿದರಂತೆ. ಅಲ್ಲೊಂದು ಹತ್ತು ಹನ್ನೆರಡು ವರ್ಷ ಕಳೆದ ನೇತ್ರಾವತಿ –ಶೇಷಪ್ಪಯ್ಯ ಸಂಸಾರ ಮುಂಬೈಗೆ ವರ್ಗಾಯಿಸಿತು. ಮುಂಬೈಯಲ್ಲಿ ಶಿವಸೇನೆಯ ಹಾವಳಿ ಹೆಚ್ಚಾಗಿದ್ದು ಅಲ್ಲೊಂದು ಶಾಖೆಯನ್ನು ತೆರೆಯಲು ಶೇಷಪ್ಪಯ್ಯ ಕುಟುಂಬ ಅಲ್ಲಿಗೆ ವಲಸೆಹೋಯಿತು. ಅಲ್ಲಿಂದ ಕಲ್ಕತ್ತದಲ್ಲಿ ನಕ್ಸಲೀಯರ ದಂಗೆ–ಕೊಲೆ–ಸುಲಿಗೆಗಳು ಹೆಚ್ಚಾಗಿ ಸಿಬಿಐ ಉಪಶಾಖೆಯನ್ನು ವ್ಯವಸ್ಥಿತಗೊಳಿಸುವುದಕ್ಕಾಗಿ ಅಲ್ಲಿಗೂ ಹೋದರು. ಕಲಕತ್ತೆಯ ಬದುಕು ಎಲ್ಲಕ್ಕಿಂತ ಭೀಕರವಾಗಿತ್ತು. ಒಬ್ಬೊಬ್ಬರೇ ಓಡಾಡುವ ಭಯ. ನಕ್ಸಲೀಯರ ದಾಳಿಗೆ ತುತ್ತಾದವರ, ಹೌರಾ ಸೇತುವೇ ಮೇಲೆ ಸತ್ತು ಬಿದ್ದ ಹೆಣಗಳ ರಾಶಿಯನ್ನು ನೋಡುತ್ತ ಜೀವಭಯದಲ್ಲಿಯೇ ದಿನಗಳೆವ ಭೀತ ಬದುಕು ಅಲ್ಲಿತ್ತು.

1980ರಲ್ಲಿ ದೆಹಲಿಗೆ ವಲಸೆ ಬಂದ ಶೇಷಪ್ಪಯ್ಯ ಮತ್ತು ನೇತ್ರಾವತಿ ಅಮ್ಮ ಇಲ್ಲಿಯೇ ನೆಲೆಯೂರಿದರು. ನಾನು ಅವರನ್ನು ಕಂಡದ್ದು ಆರ್.ಕೆ.ಪುರಂ ಸೆಕ್ಟರ್ ಐದರ ಸರಕಾರಿ ಕ್ವಾರ್ಟರಿನಲ್ಲಿ. ಆರ್.ಕೆ.ಪುರಂ ಪುರಂ ವಾಸಿ ಸುಳ್ಯದ ನನ್ನ ಆಪ್ತ ಗೆಳತಿ ಶಶಿಕಲಾ ನಾವಡ ಹಾಗೂ ಪುಟ್ಟ ಮಗಳು ದಿವ್ಯಾ, ನಾನು ನನ್ನ ಪುಟ್ಟ ಮಗುವನ್ನು ಕರೆದುಕೊಂಡು ಹೋಗಿದ್ದೆ. ದಿವ್ಯಾಳಿಗಾಗಿ ನೇತ್ರಾವತಿ ಅಮ್ಮ ವಿಧವಿಧದ ತಿಂಡಿ–ತಿನಿಸು, ಕೋಡುಬಳೆ, ಚಕ್ಕುಲಿ ಇತ್ಯಾದಿ ನಮಕೀನ್ ಮಾಡಿಡುತ್ತಿದ್ದರು. ಇಲ್ಲ ಮನೆಗೆ ಕಳಿಸುತ್ತಿದ್ದರು. ಅತಿಥಿಗಳನ್ನು ಬರಮಾಡಿಕೊಳ್ಳುವ ಅವರ ಸಂಭ್ರಮದ ಪರಿ ಕೇಳುವುದೇ ಬೇಡ. ಆಗ ನೋಡಿದ ನಾನು ಮತ್ತೆ ಅವರನ್ನು ಕಂಡಿದ್ದು ದೆಹಲಿ ಕರ್ನಾಟಕ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ. ಇರುವ ಇಬ್ಬರು ವಯಸ್ಕ ಹೆಣ್ಣು ಮಕ್ಕಳನ್ನು ಕಳೆದುಕೊಂಡ ದಂಪತಿಗಳು ನೋವನ್ನು ನುಂಗಿ ಬದುಕು ಸಾಗಿಸುತ್ತಿದ್ದರು. ಮುಂದೆ ಶೇಷಪ್ಪಯ್ಯ ಅವರೂ ತೀರಿಹೋದಮೇಲೆ ನೇತ್ರಾವತಿ ಮಯ್ಯ ಏಕಾಂಗಿಯಾಗಿ ಸಾಮಾಜಿಕ ಕಾರ್ಯ, ಧಾರ್ಮಿಕ ಕಾರ್ಯಗಳಿಗೆ ತಮ್ಮಿಂದಾದ ಸಹಾಯ , ಸೇವೆ ಸಲ್ಲಿಸುತ್ತ ..'ಕಲ್ಲರಳಿ ಹೂವಾಗಿ ಎಲ್ಲರಿಗೂ ಬೇಕಾಗಿ... ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ' ಎಂಬಂತೆ ಬದುಕುತ್ತಿದ್ದರು.. ಇದೇ ಬದುಕಿನ ಹಾದಿಯ ಬೆಳಕು.

ದೆಹಲಿಯಲ್ಲಿ ಮದ್ರಾಸ್ ಹೊಟೇಲನ್ನು ತೆರೆದು ಉತ್ತರಭಾರತೀಯರಿಗೆ ಮೊಟ್ಟಮೊದಲು ಇಡ್ಲಿ–ದೋಸೆಯ ಬಾಯಿ ರುಚಿಯನ್ನು ಪರಿಚಯಿಸಿದ್ದು ನೇತ್ರಾವತಿ ಮಯ್ಯ ಅವರ ಸೋದರ ಮಾವ ಸುಬ್ಬರಾವ್ ಅವರು. ನೇತ್ರಾವತಿ ಅವರ

ತಾಯಿಯ ತಮ್ಮ. ಇಡ್ಲಿ ದೋಸೆಯ ಪಾರ್ಸೆಲ್ ನೆಹರೂ ಅವರ ಮನೆಗೂ ಹೋಗುತ್ತಿತ್ತಂತೆ. ಐವತ್ತರ ದಶಕದ ಆ ಕಾಲಕ್ಕೆ 'ಮದ್ರಾಸ್ ಹೋಟೆಲ್' ಹಾಗೂ ಜಗ್ ಪ್ರವೇಶ್ ಚಂದ್ರ ಅವರು ತೆರೆದ 'ಇಂಡಿಯನ್ ಕಾಫಿ ಹೌಸ್' ಅತ್ಯಂತ ಜನಪ್ರಿಯತೆಯ ತಾಣಗಳಾಗಿದ್ದವು. ಎಲ್ಲ ರಾಜಕೀಯ ನಾಯಕರು, ಹಿರಿಯ ನಾಗರಿಕರು, ಪತ್ರಕರ್ತರು ಹೀಗೆ ನಗರದ ಎಲ್ಲ ಗಣ್ಯರು ಬಂದು ಸೇರಿ ಹರಟುವ ತಾಣಗಳು ಹೇಳ ಹೆಸರಿಲ್ಲವಾಗಿವೆ ಇಂದು.

'ಕಡಲತೀರದ ಭಾರ್ಗವ', ಡಾ.ಶಿವರಾಮ್ ಕಾರಂತರ ಅಣ್ಣನ ಹೆಂಡತಿ ಶೇಷಪ್ಪಯ್ಯನವರ ಸೋದರತ್ತೆ. ಕಾರಂತರು ಮಂಗಳೂರಿನಲ್ಲಿ ಓದುತ್ತಿದ್ದಾಗ ಅವರಂತೆ ಪರಸ್ಥಳದಲ್ಲಿದ್ದು ಓದುತ್ತಿದ್ದ ಸುಮಾರು ಇನ್ನೂರು ಬಡ ವಿದ್ಯಾರ್ಥಿಗಳು ಅಲ್ಲಿನ ಜಮೀನ್ದಾರರಾಗಿದ್ದ ರಾಮರಾಯರು ಎಂಬುವರ ಬಳಿ ಊಟಕ್ಕೆ ಬರುತ್ತಿದ್ದರಂತೆ. ಸಹೃದಯದ ರಾಮರಾಯರ ಅನ್ನ ದಾಸೋಹಕ್ಕೆ ಬರವಿದ್ದಿಲ್ಲ. ಆಗಿನ ಕಾಲವೂ ತೀರ ಬಡತನದ ಕಾಲ. ನೇತ್ರಾವತಿ ಅವರ ಅಮ್ಮನೂ ರಾಮರಾಯರಲ್ಲಿ ಅಡುಗೆಗೆ ಹೋಗುತ್ತಿದ್ದರಂತೆ. ಹೀಗೆ ನೆಂಟರೂ ಆಗಿದ್ದ ಶಿವರಾಮ್ ಕಾರಂತರು 'ಚೋಮನ ದುಡಿ' ಯನ್ನು ಬರೆದಾಗ ಒಂದು ಪ್ರತಿಯನ್ನು ನೇತ್ರಾವತಿ ಅಮ್ಮನಿಗೆ ಓದಲು ಕೊಟ್ಟಿದ್ದರಂತೆ. ಆಗಾಗ ಅವರ ಮನೆಗೂ ಬಂದು ಮೂರು ನಾಲ್ಕು ದಿನ ಉಳಿದುಕೊಳ್ಳುತ್ತಿದ್ದರಂತೆ.

ದೆಹಲಿಯಂಥ ಮಹಾನಗರದಲ್ಲಿ ಕುಳಿತು ಮಂಗಲಪಾಡಿಯ ಬಾಲ್ಯ ಕಾಲವನ್ನು ನೇತ್ರಾವತಿ ಮಯ್ಯ ಹೇಳುವಾಗ ನಾವೂ 'ಬೆಟ್ಟದ ಜೀವ' ಕಾದಂಬರಿಯ ಭಟ್ಟರ ಮನೆಯಲ್ಲಿ ಕೂತಿದ್ದೇವೆಯೋ ಅನಿಸಬೇಕು ! ಮಲೆನಾಡಿನ ದಟ್ಟ ಕಾಡು, ತಗ್ಗು- ದಿನ್ನೆ, ನೋಟದಾಚೆಗಿನ ಅಪೂರ್ವ ಚೆಲುವಿನ ಹಸಿರು, ಬಿಡದೇ ಸುರಿಯುವ ಮಳೆ, ಬೆಳಗಿನ ಇಬ್ಬನಿಯಲ್ಲಿ ಮಿಂದ ಚಳಿಗೆ ದೊಡ್ಡ ಗಿಂಡಿಯಲ್ಲಿನ ಬಿಸಿ ಬಿಸಿ ಕಾಫಿ, ಉರಿಯುವ ನೀರೊಲೆಯ ಹಿತ, ಹದವಾಗಿ ಕಾದ ನೀರಿನಲ್ಲಿ ಎಣ್ಣೆ ಸ್ನಾನ ಮಾಡಿದ ಪರಮ ಸುಖದ ಅನುಭೂತಿ ಮನಸ್ಸನ್ನು ಆವರಿಸುತ್ತದೆ.

ಮಂಜೇಶ್ವರ ಗೋವಿಂದ್ ಪೈ, ಶಿವರಾಮ್ ಕಾರಂತ್, ಪಾರ್ತಿ ಸುಬ್ಬರನ್ನು ಎದುರು ತಂದು ನಿಲ್ಲಿಸುವ ನೇತ್ರಾವತಿ ಮಯ್ಯ ಜೀವನದಲ್ಲಿ ಸ್ವತಃ ಕಷ್ಟ ಉಂಡು ಇತರರಿಗೆ ಸುಖವನ್ನು ನೀಡಿದ ಜೀವ. ಇಳಿ ವಯಸ್ಸಿನಲ್ಲೂ ಒಬ್ಬರೆ ಇರುವ ಅವರಿಗೆ ಜೀವದಂತೆ ಪ್ರೀತಿ ಗೌರವ ತೋರುವ ಅಸಂಖ್ಯ ಕನ್ನಡಿಗ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳ ಬಳಗ ದೊಡ್ಡದಿದೆ. ಅವರಿಗೆ ಹುಷಾರಿಲ್ಲದಾಗ ಮನೆಯಲ್ಲೇ ಇಟ್ಟುಕೊಂಡು ಸೇವೆ ಮಾಡಿದ ಕನ್ನಡದ ವೈದ್ಯ ದಂಪತಿಗಳಿದ್ದಾರೆ. ನಾವು ಇಂಟರ್ನೆಟ್ಟಿನಲ್ಲಿ ತುದಿ ಬೆರಳಲ್ಲೇ ನೀರು ಲೈಟಿನ ಬಿಲ್ ಕಟ್ಟುತ್ತ ಕೂತಲ್ಲೆ ಮಣಮಣಿಸಿದರೆ ಮಯ್ಯ ಅಮ್ಮ ಬೇರೆಯವರಿಗೆ ಹೊರೆಯಾಗುವುದು ಯಾಕೆ ಎನ್ನುತ್ತ ಈ ವಯಸ್ಸಲ್ಲೂ ಒಬ್ಬರೇ ಹೋಗಿ ಲೈಟು, ನೀರಿನ ಬಿಲ್ಲು ಕಟ್ಟಿ ಬರುತ್ತಾರೆ. ಸೈಕಲ್ ರಿಕ್ಷಾದವನ ಮೊಬೈಲ್ ನಂಬರಿಗೆ ಮಾಡಿದರೆ ಅವ ಬಂದು ಕರೆದೊಯ್ದು ಮತ್ತೆ ಮರಳಿ ಮನೆಗೆ ತಲುಪಿಸಿ ಹೋಗುತ್ತಾನಂತೆ. ತಾವು ಇಲ್ಲದ ಕಾಲಕ್ಕೂ ಅವರು ಸಮಾಜಕ್ಕೆ ಅಮೂಲ್ಯವಾದುದನ್ನು ಕೊಟ್ಟು ಹೋಗುವ ಎಲ್ಲ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದಾರೆ. ದೆಹಲಿಯ ಏಮ್ಸ್ (All India Institute of Medical Science) ಗೆ ತಮ್ಮ ದೇಹವನ್ನು ದಾನಮಾಡಿದ್ದಾರೆ. ಪುಟ್ಟ ಗೌರಮ್ಮನಂತೆ ಪುಟ್ಟ ಆಕೃತಿಯ ಮಯ್ಯನವರಲ್ಲಿ ಅಸಾಮಾನ್ಯವಾದುದನ್ನು ಹಿಂಜರಿಯದೇ, ಆಡಂಬರಿಸದೇ ಮಾಡಿಬಿಡುವ ಅದಮ್ಯ ಜೀವನೋತ್ಸಾಹಕ್ಕೆ ಬೇರೆ ಶಬ್ದಗಳಿಲ್ಲ.

ಎಂಬತ್ತಾರರ ಹರೆಯದ ನೇತ್ರಾವತಿ ಮಯ್ಯ ದೆಹಲಿಯ ಹಿರಿಯ ಕನ್ನಡತಿಯಾಗಿ ದೆಹಲಿ ಕರ್ನಾಟಕ ಸಂಘದ ಭವ್ಯ ಕಟ್ಟಡಕ್ಕೆ ತುಂಬು ಹೃದಯದಿಂದ 2.75 ಲಕ್ಷ ರೂಪಾಯಿಗಳನ್ನು ದಾನ ನೀಡಿದ್ದಾರೆ. ಅವರ ಜೀವನದರ್ಶನ ಅನುಕರಣೀಯವಾದುದು. ಅವರೇ ಹೇಳಿದ ಕತೆಯೊಂದನ್ನು ಪೋಣಿಸುತ್ತ ಹಿಂದೆ ಅವರು ಪಾರ್ತಿ ಸುಬ್ಬನ ಬಗ್ಗೆ ಬರೆದಿದ್ದೇನೆ, ಸಿಕ್ಕಾಗ ಕೊಡ್ತೇನಿ ಅಂದದ್ದನ್ನೆ ನೆನೆಯುತ್ತ ಕೂತಿದ್ದೇನೆ.

***ರೇಣುಕಾ ನಿಡಗುಂದಿ***

**ದೆಹಲಿ ಕನ್ನಡತಿ**

## ಶ್ರದ್ಧಾಂಜಲಿ



**ಶ್ರೀಮತಿ ನೇತ್ರಾವತಿ ಮಯ್ಯ**

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರು ಹಾಗೂ ಹಿರಿಯ ಕನ್ನಡತಿ ಶ್ರೀಮತಿ ನೇತ್ರಾವತಿ ಮಯ್ಯ ಅವರು ದಿನಾಂಕ 31.05.23ರಂದು ನಿಧನರಾಗಿದ್ದಾರೆ. ಇವರು ಸಂಘದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು..ದೆಹಲಿ ಕರ್ನಾಟಕ ಸಂಘ ಇವರಿಗೆ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯಕ್ಕೆ ಉದಾರ ಮನಸ್ಸಿನಿಂದ ದೇಣಿಗೆ ನೀಡಿದ್ದನ್ನು ಸ್ಮರಿಸುತ್ತಾ ಅವರ ಆತ್ಮಕ್ಕೆ ಮೋಕ್ಷ ಸಿಗಲಿ ಎಂದು ದೆಹಲಿ ಕರ್ನಾಟಕ ಸಂಘ ಪ್ರಾರ್ಥಿಸುತ್ತದೆ.



**ಶ್ರೀ ಹರಿಶ್ಚಂದ್ರ ಬಂಟ್ವಾಳ್**

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀ ಹರಿಶ್ಚಂದ್ರ ಬಂಟ್ವಾಳ್ ಅವರು 09.05.23ರಂದು ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ.

ಶ್ರೀಯುತರು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಕ್ರೀಡಾ ಸಮಿತಿಯ ಅಧ್ಯಕ್ಷರಾಗಿ ಸಲ್ಲಿಸಿದ ಸೇವೆ ಸ್ಮರಣೀಯ. ಅವರ ಆತ್ಮಕ್ಕೆ ಮೋಕ್ಷ ಸಿಗಲಿ ಎಂದು ದೆಹಲಿ ಕರ್ನಾಟಕ ಸಂಘ ಪ್ರಾರ್ಥಿಸುತ್ತದೆ.



**ಶ್ರೀ ಟಿ.ಪಿ.ಭಟ್**

ದೆಹಲಿ ಕರ್ನಾಟಕ ಸಂಘದ ಹಿರಿಯ ಆಜೀವ ಸದಸ್ಯರಾದ ಶ್ರೀ ಟಿ.ಪಿ, ಭಟ್ ಅವರು 24.05.23ರಂದು ನಿಧನರಾಗಿದ್ದಾರೆ.

ಶ್ರೀಯುತರು ದೆಹಲಿ ಕರ್ನಾಟಕ ಸಂಘದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಅವರ ಆತ್ಮಕ್ಕೆ ಮೋಕ್ಷ ಸಿಗಲಿ ಎಂದು ದೆಹಲಿ ಕರ್ನಾಟಕ ಸಂಘ ಪ್ರಾರ್ಥಿಸುತ್ತದೆ.

# ಗುರುಗಾಂವ್ ಕನ್ನಡ ಸಂಘದಿಂದ ಯುಗಾದಿ ಸಾಂಸ್ಕೃತಿಕ ಸಂಭ್ರಮ



ದಿನಾಂಕ 07.05.2023 ರಂದು ಗುರುಗಾಂವ್ ಕನ್ನಡ ಸಂಘದ ವತಿಯಿಂದ ನಡೆದ ಯುಗಾದಿ ಸಾಂಸ್ಕೃತಿಕ ಸಂಭ್ರಮದ ಕಾರ್ಯಕ್ರಮ ಅದ್ಭುತ ಯಶಸ್ಸನ್ನು ಕಂಡಿತು.

ಯುಗಾದಿ ಸಂಭ್ರಮದ ಕಾರ್ಯಕ್ರಮವನ್ನು ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಶ್ರೀ ಡಿ.ಸಿ.ಮಂಜುನಾಥ್, ಜಂಟಿ ಕಾರ್ಯದರ್ಶಿ (ಗ್ಲೋಬಲ್ ಎಸ್ಟೇಟ್ ಮ್ಯಾನೇಜ್ ಮೆಂಟ್) ಅವರು ವಿಘ್ನ ವಿನಾಯಕ ಗಣೇಶನಿಗೆ ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಿದರು. ನಂತರ ಮಾತನಾಡಿ ದೂರದ ಗುರುಗಾಂವ್ ನಗರದಲ್ಲಿ ಇಷ್ಟು ಕನ್ನಡಿಗರು ಸೇರಿದ್ದು ಬಹಳ ಸಂತೋಷವನ್ನು ತಂದಿದೆ ಎಂದು ಹೇಳುತ್ತಾ ತಮ್ಮ ಬಾಲ್ಯದ ನೆನಪುಗಳನ್ನು ಹಂಚಿಕೊಂಡರು.

ಮುಖ್ಯ ಅತಿಥಿಗಳಾಗಿದ್ದ ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನಿರ್ದೇಶಕರಾದ ಡಾ.ಬಿ.ರಘನಾಥ್ ರೆಡ್ಡಿ ಅವರು ಮಾತನಾಡಿ ಇಂತಹ ಕನ್ನಡ ಕಾರ್ಯಕ್ರಮ ಗಳಲ್ಲಿ ಹೆಚ್ಚು ಹೆಚ್ಚು ಕನ್ನಡಿಗರು ಭಾಗವಹಿಸುತ್ತಿರುವುದು ಒಂದು ಉತ್ತಮ ಬೆಳವಣಿಗೆ ಎಂದರು. ಹಾಗು HMSI IMT ಮಾನೇಸರ್ ದಲ್ಲಿ ಜನರಲ್ ಮ್ಯಾನೇಜರ್ ಆಗಿರುವ ಶ್ರೀ ಚಂದ್ರಮೋಹನ್ ಸಿ ಟಿ ಅವರು ಮಾತನಾಡುತ್ತಾ ಕನ್ನಡಿಗರು ಕನ್ನಡದ ಬಗ್ಗೆ ಆಭಿಮಾನ ಬೆಳಸಿಕೊಳ್ಳಬೇಕು, ಈ ತರಹದ ಕಾರ್ಯಕ್ರಮಗಳು ನಿರಂತರ ನಡೆಯಬೇಕು ಎಂದು ತಿಳಿಸಿದರು.

ಮಾಜಿ ಅಧ್ಯಕ್ಷರಾದ ಶ್ರೀ ಶಾಂತಕುಮಾರ್ ನಿಂಬಾಳ್ ಅವರು ಕರ್ನಾಟಕ ಮತ್ತು ಕನ್ನಡ ಭಾಷೆಯ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಶ್ರೀ ಕೃಷ್ಣಪ್ಪ. ಎಂ ಅವರು ಯುಗಾದಿ ಹಬ್ಬದ ಮಹತ್ವದ ಬಗ್ಗೆ ತಿಳಿಸುತ್ತಾಈಗ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ಆಚರಣೆ ಮಾಡುತ್ತಿರುವ ಯುಗಾದಿ ಹಬ್ಬದ ರೀತಿಗೂ ಹಿಂದಿನ ರೀತಿಗೂ ಬಹಳ ಅಂತರವಿದೆ ಎಂದು ಹೇಳುತ್ತಾ ನಮ್ಮ ಈ ಸಂಪ್ರದಾಯಗಳನ್ನ ಮುಂದಿನ ಪೀಳಿಗೆಗೆ ತಿಳಿಸಿಕೊಡಬೇಕಾಗಿ ಮನವಿ ಮಾಡಿದರು. ಕೇವಲ ನಾವು ಬದುಕುವುದಲ್ಲದೆ ನಮ್ಮ ಜೊತೆಗಿರುವ ಪ್ರಾಣಿ, ಪಕ್ಷಿ, ಮರ, ಗಿಡ ಎಲ್ಲವೂ ಬದುಕುವ ಹಾಗೆ ನೋಡಿಕೊಳ್ಳಬೇಕು ಎಂದರು. ಈ ರೀತಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮಕ್ಕಳು ಭಾಗವಹಿಸುವುದರಿಂದ ಅವರಿಗೆ ಧೈರ್ಯ ಹಾಗೂ ಮನೋಬಲ ವೃದ್ಧಿಯಾಗಲು ಅನುಕೂಲ ಆಗುತ್ತದೆ ಎಂದು ತಿಳಿಸಿದರು. ಗುರುಗಾಂವ್ ಕನ್ನಡ ಸಂಘ ಬೆಳೆದು ಬಂದ ರೀತಿಯನ್ನು ತಿಳಿಸುತ್ತಾ, ತಾವೆಲ್ಲರೂ ಕೈ ಜೋಡಿಸಿ ಸಂಘದ ಬೆಳವಣಿಗೆಗೆ ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು. ಕನ್ನಡ ಕಲಿಕಾ ಕೇಂದ್ರದ ಮಕ್ಕಳಿಗೆ ಮತ್ತು ಕನ್ನಡ ಕಲಿಕಾ ಕೇಂದ್ರದಿಂದ ಸಿ ಇ ಟಿ ಪರೀಕ್ಷೆಯಲ್ಲಿ ಪಾಲ್ಗೊಳ್ಳುತ್ತಿರುವ ಮಕ್ಕಳಿಗೆ ಯಶಸ್ಸನ್ನು ಹಾರೈಸಿದರು.

ಮಾಜಿ ಕಾರ್ಯದರ್ಶಿ ಶ್ರೀ ಸಂತೋಷ ಜೆ ಅವರು ಅತಿಥಿಗಳನ್ನು ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಈಗಿನ ಪ್ರಧಾನ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಜೋಳದರಾಶಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ ದೆಹಲಿ , ಬಿವಾಡಿ, ಗಾಜಿಯಾಬಾದ್ ಹಾಗು ಫರಿದಾಬಾದ್ ಕನ್ನಡಿಗರಿಗೆ ಹಾಗು ಈ ಕಾರ್ಯಕ್ರಮದ ಆಯೋಜನೆಯಲ್ಲಿ ಸಹಕರಿಸಿದ ಶ್ರೀ ಸಂತೋಷ ಜೆ ಮತ್ತು ಎಲೆಮರೆಯ ಕಾಯಿಯಂತೆ ಸಹಾಯ ಮಾಡುತ್ತಿರುವ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ದೆಹಲಿ ಶ್ರೀ ಸಿ.ಎಂ ನಾಗರಾಜ ಮತ್ತು ಉಪಾಧ್ಯಕ್ಷ ಡಾ. ಎಂ ಎಸ್ ಶಶಿಕುಮಾರ್ ಅವರಿಗೆ ಕೂಡ ಧನ್ಯವಾದಗಳನ್ನು ತಿಳಿಸಿದರು.

ಸಭಾ ಕಾರ್ಯಕ್ರಮಕ್ಕಿಂತ ಮುಂಚೆ ಪ್ರಸ್ತುತಗೊಂಡ ಸ್ಥಳೀಯ ಮಕ್ಕಳ, ಕಲಾವಿದರ ಕಾರ್ಯಕ್ರಮಗಳ ಪ್ರತಿ ಕ್ಷಣಗಳು ಮನಮೋಹಕವಾಗಿ ಮೂಡಿ ಬಂದವಲ್ಲದೆ ಎಲ್ಲಾ ಮಕ್ಕಳು ಅದ್ವಿತೀಯವಾಗಿ ಹಾಡು ಮತ್ತು ನೃತ್ಯಗಳನ್ನು ಪ್ರಸ್ತುತ ಪಡಿಸಿದರು.

ಅನಂತರ ಕರ್ನಾಟಕದಿಂದ ಬಂದ ಕಲಾವಿದರಾದ ಜೀ–ಕನ್ನಡ ವಾಹಿನಿಯ ಸರಿಗಮಪ ಖ್ಯಾತಿ ಕಂಬದ ರಂಗಯ್ಯ,ಗಾಯಕಿ ಅನನ್ಯ ಹಾಗು ಲಕ್ಷ್ಮಣ ನೆಲಸೊಗಡು ತಂಡದ ಕಲಾವಿದರಿಂದ ವಿವಿಧ ನೃತ್ಯ ಕಾರ್ಯಕ್ರಮಗಳು ಅಮೋಘವಾಗಿ ಮೂಡಿ ಬಂದವು. ಸಭಾಂಗಣ ದೆಹಲಿ ಮತ್ತು ಎನ್ ಸಿ ಆರ್ ಪ್ರದೇಶಗಳಿಂದ ಬಂದಿದ್ದ ಕನ್ನಡಿಗರಿಂದ ತುಂಬಿ ತುಳುಕಿತ್ತು ಮಾತ್ರವಲ್ಲ ಮಕ್ಕಳು,ಮಹಿಳೆಯರು ಹಾಗು ಪುರುಷರು ಎಲ್ಲರೂ ವೇದಿಕೆಯೇರಿ ನೃತ್ಯ ಮಾಡಿದರು.

ಉಪಾಧ್ಯಕ್ಷರಾದ ಶ್ರೀ ರಾಜಕುಮಾರ ನಿಲೂರ ಸಭಾ ಕಾರ್ಯಕ್ರಮವನ್ನು ನಿರ್ವಹಿಸಿದರು. ಉಪಾಧ್ಯಕ್ಷೆ ಶ್ರೀಮತಿ ಮಾಲ ರಮೇಶ ಸುಂದರವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳ ನಿರೂಪಣೆ ಮಾಡಿದರು. ಪಂಚಾಂಗ ಶ್ರಾವಣ ಮಾಡಿದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಗಿರೀಶ್ ಕುಲಕರ್ಣಿ ಅವರೂ ಸೇರಿದಂತೆ ಸಮಿತಿಯ ಎಲ್ಲ ಸದಸ್ಯರೂ ಪದಾಧಿಕಾರಿಗಳೂ ತೆರೆ ಮರೆಯಲ್ಲಿದ್ದುಕೊಂಡು ಇಡೀ ಕಾರ್ಯಕ್ರಮವನ್ನು ಅತ್ಯುತ್ತಮವಾಗಿ ಅಯೋಜಿಸಿ ಯಶಸ್ವಿಗೊಳಿಸುವಲ್ಲಿ ನೆರವಾದರು.

**ಚಂದ್ರಶೇಖರ ಜೋಳದರಾಶಿ**

# ಭಿವಾಡಿ ಕನ್ನಡಿಗರಿಂದ ಯುಗಾದಿ ಹಬ್ಬ ಆಚರಣೆ



ಭಿವಾಡಿ ಕನ್ನಡ ಸಂಘದಿಂದ ಮಾರ್ಚ್ 26 ನೇ ರವಿವಾರ, ಭಿವಾಡಿಯ ಹಿಲ್ ವ್ಯೂ ಗಾರ್ಡನ್, ಟ್ರೆಹಾನ್‌ನ ಸಭಾಗೃಹದಲ್ಲಿ ಯುಗಾದಿ ಸಮ್ಮಿಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಯುಗಾದಿ ನಮ್ಮ ಭಾರತೀಯ ಸಂಸ್ಕೃತಿಯ ಹೊಸ ವರ್ಷ. ಈ ಹಬ್ಬವನ್ನು ಆಚರಿಸುವುದೇ ಒಂದು ಸಂಭ್ರಮ, ಜೀವನದಲ್ಲಿ ಕಷ್ಟ ಮತ್ತು ಸುಖಗಳನ್ನು ಸಮನಾಗಿ ತಗೆದುಕೊಳ್ಳಬೇಕು ಎಂದು ಈ ಹಬ್ಬ ನಮ್ಮೆಲ್ಲರಿಗೂ ನೆನಪಿಸುತ್ತೆ.

ಈ ಯುಗಾದಿ ಸಮ್ಮಿಲನ ಎಲ್ಲರಿಗೂ ತಾಯ್ನಾಡಲ್ಲಿ ಇದ್ದೇವೇನೋ ಅನ್ನುವ ಭಾವನೆಯನ್ನು ತಂದಿತ್ತು.

ಈ ಹಬ್ಬದ ನಿಮಿತ್ತ ವಿಶೇಷವಾಗಿ ಸಂಘದ ಮಹಿಳಾ ಸದಸ್ಯೆಯುರು ಹಾಕಿದ ಬಣ್ಣದ ರಂಗೋಲಿ ಹಾಗೂ ಉತ್ಸಾಹೀ ಮಹನೀಯರು ಪರಿಶ್ರಮದಿಂದ ಮಾವಿನ ಎಲೆ ಮತ್ತು ಬೇವು, ಹೂಗಳಿಂದ ಅಲಂಕರಿಸಿ ತಯಾರಿಸಿದ ವೇದಿಕೆ ಕಾರ್ಯಕ್ರಮಕ್ಕೆ ಮೆರಗನ್ನು ತಂದಿತ್ತು.

ಮಾತೆ ಭುವನೇಶ್ವರಿ ಪೂಜೆಯಿಂದ ಆರಂಭಗೊಂಡು, ಭಿವಾಡಿ ಕನ್ನಡಿಗರಾದ ಜಯತೀರ್ಥ ಮಹಿಷಿ ಅವರಿಂದ ಗಣಪತಿ ಮಂತ್ರ ಪಠಣ ಹಾಗೂ ಸಂಘದ ಕಾರ್ಯದರ್ಶಿಯಾದ ಗೋಪಾಲಕೃಷ್ಣ ಭಟ್ ಅವರಿಂದ ಪಂಚಾಂಗ ಶ್ರವಣ ನಡೆಯಿತು. ಜೊತೆಗೆ ಈ ಕಾರ್ಯಕ್ರಮದ ಕೇಂದ್ರ ಬಿಂದುಗಳಾದ ಭಿವಾಡಿ ಕನ್ನಡ ಕಲಿಕಾ ಕೇಂದ್ರದ ಮುದ್ದು ಮಕ್ಕಳ ಸುಂದರ ನಿರೂಪಣೆ, ನೃತ್ಯ, ಹಾಡು, ಸಮೂಹ ನೃತ್ಯ ಇವೆಲ್ಲ ನೋಡುವವರ ಗಮನ ಸೆಳೆಯುತಿತ್ತು. ಭಿವಾಡಿಯ ಎಸ್. ಪಿ. ಬಾಲಸುಬ್ರಹ್ಮಣ್ಯಂ ಎಂದೇ ಖ್ಯಾತರಾದ ಸಂಘದ ಸದಸ್ಯ ಸುಂದರ ಪಾಂಡ್ಯನ್ ಅವರ ಸುಮಧುರ ಕಂಠದಿಂದ ಹೊರಬಂದ ಡಾ. ಪುನೀತ್ ರಾಜಕುಮಾರ್ ಅವರ ಬೊಂಬೆ ಹೇಳುತ್ತೈತೆ ಹಾಡು ಕೆಲ ನಿಮಿಷ ಎಲ್ಲರನ್ನು ಸಿನಿ ಲೋಕಕ್ಕೆ ಕರೆದೊಯ್ದಿತ್ತು. ಸಂಘದ ಮಹಿಳಾ ಸದಸ್ಯೆಯರಾದ ಸ್ವಾತಿ ಮಯ್ಯ, ಅರ್ಚನಾ ಕುರಕೋಟಿ ಹಾಗೂ ಧನಲಕ್ಷ್ಮಿ ಗೌಡ ಅವರ ಹಾಡುಗಳು ಕೇಳುವವರನ್ನು ಸಂಗೀತ ಲೋಕದಲ್ಲಿ ವಿಹಾರಕ್ಕೆ ಒಯ್ದಿತ್ತು. ಭಿವಾಡಿ ಕನ್ನಡ ಕಲಿಕಾ ಕೇಂದ್ರಕ್ಕೆ ಸದಾ ಪ್ರೋತ್ಸಾಹ ನೀಡುತ್ತಿರುವ ಶ್ರೀ ಅರವಿಂದ ಬಿಜ್ಜೈ ಮತ್ತು ಸಂಗಡಿಗರು ದೆಹಲಿಯಿಂದ ಬಂದು ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದ್ದು ನಮ್ಮೆಲ್ಲರ ಉತ್ಸಾಹವನ್ನು ದ್ವಿಗುಣಗೊಳಿಸಿತ್ತು. ಮಕ್ಕಳಿಗಾಗಿ ಚಿತ್ರ ಬಿಡಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು

ಸಂಘದ ಉಪಾಧ್ಯಕ್ಷೆ ವೀಣಾ ದೇಸಾಯಿ ಮತ್ತು ಖಜಾಂಚಿ ರವಿ ಜಿ. ಎಚ್. ಇಬ್ಬರು ಯುಗಾದಿ ಹಬ್ಬದ ಬಗ್ಗೆ ರಸಪ್ರಶ್ನೆ ಕಾರ್ಯಕ್ರಮವನ್ನು ಅದ್ಭುತವಾಗಿ ನಡೆಸಿಕೊಟ್ಟರು.

**ನರಸಿಂಹ ಕುಲಕರ್ಣಿ**


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**

A HOUSE OF QUALITY PRINTING

B-303, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimata
June -2023, Vol. No.33, Issue No. 9, Price Rs.1/-
RNI Regn. No. 53405/91, DL-SW-01/4016/22-24
Date of Publication : June 8th / 9th, Posting Date : 10th / 11th, Total Pages-16 Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P



ಸಂಸತ್ತಿನ ಮೇಲ್ಮನೆ ರಾಜ್ಯಸಭೆಯ ಒಳಾಂಗಣ ನೋಟ



ಸಂಸತ್ತಿನ ಕೆಳಮನೆ ಲೋಕಸಭೆಯ ಒಳಾಂಗಣ ನೋಟ